ಹಸಿರೀಕರಣ ಅಭಿಯಾನಕ್ಕೆ ಆದ್ಯತೆ



ವಿಜಯವಾಣಿ

ಜಿಕೆವಿಕೆಯಲ್ಲಿ ಹಮ್ಮಿಕೊಂಡಿದ್ದ ವನಮಹೋತ್ಸವ ಕಾರ್ಯಕ್ರಮದಲ್ಲಿ ಕೃಷಿ ಸಚಿವ ಎನ್.ಚೆಲುವರಾಯ ಸ್ವಾಮಿ ಸಸಿಗಳನ್ನು ನೆಟ್ಟರು. ಬೆಂ. ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ, ಬೆಂಗಳೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಎಸ್.ಎಸ್. ಲಿಂಗರಾಜು ಇತರರಿದ್ದರು.

ಬೆಂಗಳೂರು: ರಾಜ್ಯದಲ್ಲಿ ಹಾಲಿ ಹೊಂದಿರುವ ಅರಣ್ಯ ಪ್ರದೇಶವನ್ನು ವಿಸ್ತರಿಸಲು ಹಸಿರೀಕರಣ ಅಭಿಯಾನಕ್ಕೆ ಆದ್ಯತೆ ನೀಡಬೇಕಾದ ಅಗತ್ಯ ಇದೆ ಎಂದು ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ತಿಳಿಸಿದ್ದಾರೆ.

ಬೆಂಗಳೂರು ಕೃಷಿ ವಿವಿ ಕ್ಯಾಂಪಸ್ ಜಿಕೆವಿಕೆಯಲ್ಲಿ ಅರಣ್ಯ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವನಮಹೋತ್ಸವ ಕಾರ್ಯಕ್ರಮದಲ್ಲಿ ಸಸಿಗಳನ್ನು ನೆಟ್ಟು ಮಾತನಾಡಿದರು. ರಾಷ್ಟ್ರೀಯ ಅರಣ್ಯ ನೀತಿ ಗುರಿಯನ್ನು ತಲುಪಲು ಅರಣ್ಯ ಪ್ರದೇಶಗಳಲ್ಲಿನ ಖಾಲಿ ಜಾಗ, ಅರಣ್ಯೇತರ ಸರ್ಕಾರಿ ಸ್ಥಳಗಳು, ರಸ್ತೆಬದಿ, ಶೈಕ್ಷಣಿಕ ಸಂಸ್ಥೆಗಳು, ರೈತರ ಜಮೀನಿನ ಬದುಗಳು ಹಾಗೂ ಕೆರೆ-ಕುಂಟೆ ಬಳಿ ಗಿಡ ನೆಡುವ ಕಾರ್ಯಕ್ರಮವನ್ನು ಹೆಚ್ಚಾಗಿ ಕೈಗೆತ್ತಿಕೊಳ್ಳಬೇಕಿದೆ. ನೆಟ್ಟ ಸಸಿಗಳನ್ನು ಜೋಪಾನ ಮಾಡುವತ್ತ ಹೆಚ್ಚಿನ ಆಸ್ಥೆ ವಹಿಸಬೇಕಿದೆ ಎಂದರು.

» ಕೃಷಿ ಸಚಿವ ಚೆಲುವರಾಯ ಸ್ವಾಮಿ ಸಲಹೆ

ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ ಮಾತನಾಡಿ, ಕೃಷಿ ವಿವಿಯಿಂದ ಹಸಿರೀಕರಣ ಕಾರ್ಯಕ್ರಮಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಮಾಸಾಂತ್ಯದೊಳಗೆ ವಿವಿ ಆವರಣದಲ್ಲಿ 2 ಸಾವಿರ ಸಸಿಗಳನ್ನು ನೆಡಲು ಸಿದ್ಧತೆ ನಡೆಸಲಾಗಿದೆ ಎಂದರು. ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ, ಬೆಂಗಳೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಎಸ್.ಎಸ್. ಲಿಂಗರಾಜು ಹಾಜರಿದ್ದರು.

Vijayavani Pg.5A

ಕನ್ನಡಪ್ರಭ
ಭಾನುವಾರ 9.7.2023

ವನಮಹೋತ್ಸವ ಖಾಲಿ ಜಾಗದಲ್ಲಿ ಸಸಿ ನೆಡುವ ಅಭಿಯಾನ ಅನುಷ್ಠಾನ ಅವಶ್ಯಕ: ಕೃಷಿ ಸಚಿವ

ಹಸಿರೀಕರಣ ಅಗತ್ಯ: ಚಲುವರಾಯಸ್ವಾಮಿ

• ಕನ್ನಡಪ್ರಭ ವಾರ್ತೆ ಬೆಂಗಳೂರು

ಮರ-ಗಿಡಗಳು ಕ್ಷೀಣಿಸುತ್ತಿರುವುದು ಪರಿಸರ ಹಾಗೂ ಹವಾಮಾನದ ಮೇಲೆ ನೇರ ಪರಿಣಾಮ ಬೀರುತ್ತದೆ. ಪರಿಸರ ಮಾಲಿನ್ಯಕ್ಕೆ ಕಾರಣವಾಗಿದೆ. ಆದ್ದರಿಂದ ಹಸಿರೀಕರಣ ಅಭಿಯಾನ ಮಾಡುವ ಅವಶ್ಯಕತೆ ಇದೆ ಎಂದು ಕೃಷಿ ಸಚಿವ ಚೆಲುವರಾಯಸ್ವಾಮಿ ಅಭಿಪ್ರಾಯಪಟ್ಟರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಮತ್ತು ಅರಣ್ಯ ಇಲಾಖೆ ಆಶ್ರಯದಲ್ಲಿ ಹೆಬ್ಬಾಳದ ಜಿಕೆವಿಕೆಯಲ್ಲಿ ಆಯೋಜಿಸಿದ್ದ ವನಮಹೋತ್ಸವ ಕಾರ್ಯಕ್ರಮಕ್ಕೆ ಸಸಿ ನೆಡುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಮರ-ಗಿಡಗಳು ಕಡಿಮೆ ಆದರೆ ಅದು ಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಉಂಟು ಮಾಡಲಿದೆ. ರಾಷ್ಟ್ರೀಯ ಅರಣ್ಯ ನೀತಿಯ ಗುರಿತಲುಪಲು ಅರಣ್ಯ ಪ್ರದೇಶದ ಖಾಲಿ ಜಾಗ, ಸರ್ಕಾರಿ ಸ್ಥಳ, ರಸ್ತೆ ಬದಿ, ಶೈಕ್ಷಣಿಕ ಸಂಸ್ಥೆ, ಇಲಾಖೆಗಳ ಅವರಣ, ರೈತರ ಜಮೀನಿನ ಬದು, ಕೆರೆ ಅಂಗಳ ಮತ್ತಿತರ ಪ್ರದೇಶಗಳಲ್ಲಿ ಹಸಿರೀಕರಣ ಕಾರ್ಯಕ್ರಮವನ್ನು ಅಭಿಯಾನವನ್ನಾಗಿ ಅನುಷ್ಠಾನಗೊಳಿಸುವುದು ಅವಶ್ಯಕವಾಗಿದೆ. ವಿಶೇಷ ಮಾಡಿದ ಸಸಿಗಳ ದಾಖಲಾತಿ ನಿರ್ವಹಿಸಲು ಅರಣ್ಯ ಇಲಾಖೆಗೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದರು.



ಬೆಂಗಳೂರು ಕೃಷಿ ವಿವಿ ಮತ್ತು ಅರಣ್ಯ ಇಲಾಖೆಯಿಂದ ಹೆಬ್ಬಾಳದ ಜಿಕೆವಿಕೆಯಲ್ಲಿ ಆಯೋಜಿಸಿದ್ದ ವನಮಹೋತ್ಸವದಲ್ಲಿ ಕೃಷಿ ಸಚಿವ ಚೆಲುವರಾಯಸ್ವಾಮಿ ಇತರರು ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ನಗರ ಜಿಲ್ಲಾಧಿಕಾರಿ ಕೆ.ಎ.ದಯಾನಂದ, ಬೆಂಗಳೂರು ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಎಸ್.ಎಸ್.ಲಿಂಗರಾಜು, ಕೃಷಿ ವಿವಿ ಕುಲಪತಿ ಡಾ। ಎಸ್.ವಿ.ಸುರೇಶ ಹಾಜರಿದ್ದರು.

ವಿಡೈಲಿ ನ್ಯೂಸ್
ಶನಿವಾರ 08 ಜುಲೈ 2023

ಸಸಿ ನೆಡುವ ಕಾರ್ಯಕ್ರಮ



ಮಂಡ್ಯ: ಬೆಂಗಳೂರು ಜಿಲ್ಲಾಡಳಿತ, ಅರಣ್ಯ ಇಲಾಖೆ ಹಾಗು ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ ಸಹಭಾಗಿತ್ವದಲ್ಲಿ ಉಸಿರಿಗೆ ಹಸಿರು ಹಸಿರಿಗೆ ಸಸಿಗಳು ಎಂಬ ವಿಶೇಷ ಕಾರ್ಯಕ್ರಮಕ್ಕೆ ಕೃಷಿ ಸಚಿವ ಚೆಲುವರಾಯಸ್ವಾಮಿ ಚಾಲನೆ ನೀಡಿದರು. ಜಿಕೆವಿಕೆ ಆವರಣದಲ್ಲಿ ಸಸಿ ನೆಡುವ ಮೂಲಕ ಕೃಷಿ ಸಚಿವ ಚೆಲುವರಾಯಸ್ವಾಮಿಯವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ವೇಳೆ ಕೃಷಿ ವಿಶ್ವವಿದ್ಯಾಲಯ ಕುಲಪತಿಗಳು, ಬೆಂಗಳೂರು ಜಿಲ್ಲಾಧಿಕಾರಿ, ಅರಣ್ಯ ಅಧಿಕಾರಿಗಳು, ಕೃಷಿ ಇಲಾಖೆ ನಿರ್ದೇಶಕರು, ಕೃಷಿ ಅಧಿಕಾರಿಗಳು ಮುಂತಾದವರಿದ್ದರು.

ಈನಾಡು
ಸೌಮವಾರಂ ಜುಲೈ 10, 2023



ಚಿಂತಪಂಡು ಡಾಕ್ಟರ್ ಕಲ್ಪನ ಟಮೋಟಾ

చెంతనుండగా చింత.. ಟಮೋಟಾ ದಿಗುಲುಂಡದುಗಾ

ಬೆಂಗಳೂರು (ಯಕ್ಕಂತಪುರ),: ಪ್ರಸ್ತುತಂ ಮಾಕ್ಟೆಟ್‌ಲೆ ಟಮೋಟಾ ದರ ಆಶಾಕ್ನಿ ಎಗಬಾಕುತುಂಡಟಂತೆ ಗೃಹಿಣಲು ದಾನಿಕಿ ಬದುಲು ಚಿಂತಪಂಡುನು ವಿನಿಯೋಗಿಂದಾಲನಿ ಬೆಂಗಳೂರು ವಿಶ್ವವಿದ್ಯಾಲಯಂ ಶಾಸ್ತ್ರವೆತ್ತಲು ಸೂಚಿಸ್ತುನ್ನಾರು. ಆಯುರ್ವೇದ ಗುಣಾಲು ಅಧಿಕಂಗಾ ಉನ್ನ ಚಿಂತಪಂಡುನು ವಂಟಲ್ಲೆ ಉಪಯೋಗಿಂದಾಲನಿ ವಿಶ್ವವಿದ್ಯಾಲಯಂ ಶಿಕ್ಷಣ ವಿಭಾಗಂ ಅಧ್ಯಾಪಕುರಾಲು ಡಾಕ್ಟರ್ ಕಲ್ಪನ ಪೆರ್ಕೊಂಟುನ್ನಾರು. ವಂದಗ್ರಾಮುಲ ಟಮೋಟಾಲೆ ಪ್ರೌಟೆನ್ಸ್ 0.88 ಗ್ರಾಮುಲು, ಕ್ಯಾಲ್ಷಿಯಂ ಪದಿಗ್ರಾಮುಲು, ಐನುಮು 1.2 ಗ್ರಾಮುಲು ಉಂದಿ. ಟಮೋಟಾ ಎಕ್ಕುವಗಾ ವಿನಿಯೋಗಿಸ್ತೆ ಆ ಪ್ರಭಾವಂ ಮೂತ್ರಪಿಂದಾಲಪೈ ಪಡಿ ರಾಳ್ಳು ಏರ್ಪಡೆ ಅವಕಾಶಾಲು ಉಂದಟಂತೆ ಪಾಟು, ಲೈಕೋಪೆನ್ ಎಕ್ಕುವೆ ರಕ್ತಂ ರಂಗು ಮಾರುತುಂದನ್ನಾರು. ಸಾಲ್ಮೊನೆಲ್ಲಾ ಅನೆ ಬ್ಯಾಕ್ಟೆರಿಯಾ ಟಮೋಟಾಲೆ ಎಕ್ಕುವ ಉಂಟುಂದನ್ನಾರು. ದೆಹಂಲೆಕಿ ಪ್ರವೇಶಿಂಚಿ ಅತಿಸಾರ ವ್ಯಾಧಿಕಿ ಕಾರಣಮವುತುಂದನಿ ಹೆಚ್ಚರಿಂದಾರು. ಪ್ರಾಚೀನ ಕಾಲಂ ನುಂಚಿ ವಂಟಗದಿಲೆ ಚಿಂತಪಂಡುಕು ಪ್ರತ್ಯೇಕ ಸ್ಥಾನಂ ಉಂದಿ. ಎಕ್ಕುವ ಔಷಧ ಗುಣಾಲು ಕಲಿಗಿನ ವಂದಗ್ರಾಮುಲ ಚಿಂತಪಂಡುಲೆ ಪೌಷ್ಟಿಕಾಂಶಾಲು ಎಕ್ಕುವಗಾ ಉನ್ನಟ್ಟು ಅಮಿ ತೆಲಿಪಾರು. ಯಾಂಟಿಆಕ್ಸಿಡೆಂಟ್ ಎಕ್ಕುವಗಾ ಉನ್ನಂಡು ವಲ್ಲ ಜೀರ್ಣಂ ಎಕ್ಕುವ ಅವುತುಂದನಿ, ಗೌಂತು ನೌಪ್ಪಿ, ಜಲಬುಕು ಚಿಂತಪಂಡು, ಮಿರಿಯಾಲತೆ ಕಾಸಿನ ರಸಂ ರಾಮಬಾಣಂಗಾ ಪನಿ ಚೆಸ್ತುಂದನ್ನಾರು. ಶ್ವಾಸ ಕೋಶ, ಹೃದಯಂ, ಉದರಕೋಶಂ ವ್ಯಾದುಲತೆ ಪಾಟು ಕ್ಯಾನ್ಸರ್ ನಿಯಂತ್ರಿಂಚೆ ಶಕ್ತಿ ಉಂದನಿ ಅಮಿ ವಿವರಿಂದಾರು. ಖರೀದಿನ ಟಮೋಟಾ ವಿನಿಯೋಗಿಂಚೆ ಬದುಲು ವಂಟಲ್ಲೆ ಉನ್ನ ಚಿಂತಪಂಡು ಉಪಯೋಗಿಂಚಡಂ ಮಂಚಿದನಿ ಸೂಚಿಂದಾರು.

SamyukthaKarnataka Pg.02

ಜೂಜಾಟದಲ್ಲಿ ತೊಡಗಿದ ಟೊಮೇಟೊ ಬೆಳೆಗಾರರು | ಹುಣಸೆಗೂ ಹೆಚ್ಚಿದ ಬೇಡಿಕೆ, ದರ ಏರಿಕೆ ಬಿಸಿ

ಟೊಮೇಟೊ ದುಬಾರಿ: ಹುಣಸೆ ಹಣ್ಣಿನತ್ತ ಚಿತ್ತ

ಬೆಂಗಳೂರು: ರಾಜ್ಯದಲ್ಲಿ ಮಳೆ, ಚಳಿಯಷ್ಟೆ ನಡುಗಿಸುತ್ತಿಲ್ಲ. ಬದಲಿಗೆ ತರಕಾರಿ ಬೆಲೆ ಕೇಳಿದರೆ ಸಾಕು ಕೈ ಕಾಲು ನಡುಗಲಾರಂಭಿಸುತ್ತಿದೆ ಗ್ರಾಹಕರಲ್ಲಿ. ಒಂದೆಡೆ ತೈಲ ಬೆಲೆಯನ್ನೂ ಮೀರಿ ನಿಂತಿರುವ ತರಕಾರಿಗಳು. ಅದರಲ್ಲೂ ಎಲ್ಲಾ ಖಾದ್ಯಕ್ಕೂ ಅಗತ್ಯವಾಗಿದ್ದ ಟೊಮೇಟೊ ಶತಕ ಬಾರಿಸಿರುವುದು ಗ್ರಾಹಕರು ಟೊಮೆಟೊ ಬಿಟ್ಟು ಹುಳಿಗೆ ಹುಣಸೆ ಹಣ್ಣಿಗೆ ಮೊರೆಹೋಗಿದ್ದಾರೆ.

ಮಾರುಕಟ್ಟೆ ಅಥವಾ ತರಕಾರಿ ಅಂಗಡಿಗೆ ಹೋಗಿ ಟೊಮೆಟೊ ದರ ಕೇಳಿದರೆ ಹೌಹಾರುತ್ತಿದ್ದಾರೆ ಗ್ರಾಹಕರು. ಕೆ ಜಿ ಟೊಮೆಟೊ 150 ರೂಪಾಯಿಗೆ ಬೆಂಗಳೂರಿನ ಸೂಪರ್ ಮಾರ್ಕೆಟ್ ಗಳಲ್ಲಿ ಮಾರಾಟವಾಗುತ್ತಿದೆ. ಕಾಲು ಕೆಜಿ ಟೊಮೆಟೊ 40 ರಿಂದ 50 ರೂಪಾಯಿ. ಅರ್ಧ ಕೆ.ಜಿ.ಗೆ 75 ರಿಂದ 80 ರೂಪಾಯಿಗೆ ತಲುಪಿದೆ. ಹಾಗೆಯೇ, ಮಾರುಕಟ್ಟೆಗಳಲ್ಲಿ 120 ರಿಂದ 130 ರೂಪಾಯಿ, ತರಕಾರಿ ಅಂಗಡಿಯಲ್ಲಿ 130 ರಿಂದ 140 ರೂಪಾಯಿ ಇದೆ. ಈ ಬಾರಿ ಟೊಮೆಟೊ ಬೆಳೆದ ರೈತನಿಗೆ ಬಂಪರ್ ಲಾಟರಿ ಹೊಡೆದಂತಾಗಿದೆ. ಆದರೆ, ಗ್ರಾಹಕರಿಗೆ ಮಾತ್ರ ಟೊಮೇಟೊ ಕರೆಂಟ್ ಬಿಲ್ ಗಿಂತ ಹೆಚ್ಚಿನ ಶಾಕ್ ಹೊಡೆಸಿದೆ ಎನ್ನಬಹುದು. ಮಾರುಕಟ್ಟೆಯಲ್ಲಿ ಟೊಮೇಟೊ ಬಾಕ್ಸ್ ಗಳು 3000 ರಿಂದ 4000 ಕ್ಕೆ ಮಾರಾಟವಾಗುತ್ತಿದೆ.



- ಟೊಮೇಟೊ ದರಕ್ಕೆ ಹೌಹಾರುತ್ತಿರುವ ಗ್ರಾಹಕರು
- ನಿರೀಕ್ಷಿತ ಮಳೆಯಾಗದೇ ಗಗನಕ್ಕೇರಿದ ತರಕಾರಿ ಬೆಲೆ

ರಾಜ್ಯದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದ ಕಾರಣ ತರಕಾರಿ ಬೆಲೆಗಳು ಗಗನಕ್ಕೇರಿದೆ. ಅದರಲ್ಲೂ ದಿನನಿತ್ಯ ಬಳಸುವಂತಹ ಟೊಮೇಟೊ ಹಣ್ಣಿನ ಬೆಲೆ ರಾಕೆಟ್ ರೀತಿಯಲ್ಲಿ ಗಗನಕ್ಕೇರುತ್ತಿರುವುದು ಗ್ರಾಹಕರಿಗೆ ತಲೆ ನೋವಾಗಿದೆ. ದಿನ ಕಳೆದಂತೆ ಬೆಲೆ ಹೆಚ್ಚುತ್ತಿರುವುದು ಗ್ರಾಹಕರಿಗೆ ಮತ್ತಷ್ಟು ಆತಂಕ ತಂದಿದೆ. ಟೊಮೇಟೊ ಬೆಳೆಗೆ ಒಮ್ಮೊಮ್ಮೆ ರಾಜಮರ್ಯಾದೆ, ಮತ್ತೊಮ್ಮೆ ಬೆಲೆ ಕುಸಿದಾಗ ಕೇಳುವವರಿಲ್ಲದೆ ರೈತರು ಬೀದಿಗೆ ಚೆಲ್ಲಾಡುವ ಸ್ಥಿತಿ ಬರುತ್ತದೆ. ಹೀಗಾಗಿ ಟೊಮೇಟೊ ಬೆಳೆದವರು ಜೂಜಾಟದಲ್ಲಿ ತೊಡಗಿದಂತಾಗುತ್ತಿದೆ. ಕಳೆದ ಎರಡು ತಿಂಗಳಿಂದ ಟೊಮೇಟೊ ದರ ಗಗನಕ್ಕೆ ಏರಿದ್ದು ಗ್ರಾಹಕರು ಕಂಗಾಲಾಗಿದ್ದಾರೆ. ನಿರಂತರ ಟೊಮೇಟೊ ಬಳಸುವವರು ಹುಣಸೆ ಹಣ್ಣಿನ ಮೊರೆ ಹೋಗಿದ್ದಾರೆ.

ಚಿನ್ನದ ಬೆಲೆಯಾಗಿ ಸಂಚುರಿ ಬಾರಿಸಿದ್ದ ಟೊಮೇಟೊ ಬೆಳೆ ರೈತರನ್ನು ಆರ್ಥಿಕವಾಗಿ ಬಲಾಢ್ಯರನ್ನಾಗಿಸಿದೆ. ಮುಂಗಾರು ಮಳೆಯಲ್ಲಿ ರಾಮನಗರ ಜಿಲ್ಲೆಯ ರೈತರ ಕೃಷಿಜಮೀನಿನಲ್ಲಿ ಬೆಳೆದಿದ್ದ ಟೊಮೇಟೊ ಒಳ್ಳೆಯ ಇಳುವರಿ ಕೊಟ್ಟಿತ್ತು. ಇಳುವರಿ ಹೆಚ್ಚಳದಿಂದ ಟೊಮೇಟೊಗೆ ಮಾರುಕಟ್ಟೆಯಲ್ಲಿ ರೈತ ಊಹಿಸಿದಷ್ಟು ಬೆಂಬಲ ಬೆಲೆ ಸಿಕ್ಕಿರಲಿಲ್ಲ. ಆದರೆ ಹಿಂಗಾರು ಮಾರುತಗಳು ನಿರೀಕ್ಷೆಗೂ ಮೀರಿ ಸುರಿದ ಕಾರಣ ಈ ಬೆಳೆಯ ಬೆಳೆಗಾರರಿಗೆ ಸಿಹಿಯುಣಿಸಿದೆ.

ಕೆಜಿಗೆ 90 ರೂಪಾಯಿ ಇದ್ದ ಹುಣಸೆ ಹಣ್ಣಿನ ದರ 120ಕ್ಕೆ ಏರಿಕೆ

ಹುಣಸೆ ಕೆಲವು ತಿಂಗಳವರೆಗೆ ಇಟ್ಟರೂ ಕೆಡದಂತಹ ಪದಾರ್ಥವಾಗಿದ್ದು ಇದರಿಂದ ಹೋಟೆಲ್, ಖಾನಾವಳಿ, ಇನ್ನಿತರ ಮಾಂಸಾಹಾರಿ ಹೋಟೆಲ್‌ಗಳಲ್ಲಿಯೂ ಈಗ ಹುಣಸೆಹಣ್ಣು ಹೆಚ್ಚು ಬಳಕೆಯಾಗುತ್ತಿದೆ. ಹುಣಸೆ ಬಳಸುವವರ ವರ್ಗ ಎಂದಿಗೂ ಟೊಮೇಟೊ ಬಳಸುತ್ತಿರಲಿಲ್ಲ. ಆದರೆ ಕಡಿಮೆ ಬೆಲೆಯಲ್ಲಿ ಸಿಗುವ ಕಾರಣಕ್ಕೆ ಟೊಮೇಟೊಗೆ ಮೊರೆ ಹೋಗುತ್ತಿದ್ದರು. ಈಗ ದರ ಏರಿಕೆ ಬಿಸಿ ಸಹಜವಾಗಿ ಹುಣಸೆಗೆ ಮರಳುವಂತಾಗಿದೆ.

VijayaKarnataka Pg.Spl 02

ಹೋಟೆಲ್‌ಗಳಲ್ಲಿ ಟೊಮೆಟೊ ಬಳಕೆಯೇ ಇಲ್ಲ

ಹೋಟೆಲ್ ಮಾಲೀಕರು ಹಲವು ಆಡುಗೆ, ತಿಂಡಿಗಳಿಗೆ ಟೊಮೆಟೊ ಪೇಸ್ಟ್ ಬಳಸಲು ಮುಂದಾಗಿದ್ದಾರೆ. ಕೆಲವರು ಟೊಮೆಟೊ ಬಳಸುವ ತಿಂಡಿಗಳನ್ನೇ ಕಡಿಮೆ ಮಾಡಿದ್ದಾರೆ. ಸುಮಾರು 20 ರೂ.ಗೆ ಖರೀದಿಸುವ ಟೊಮೆಟೊ ಪೇಸ್ಟ್ ಒಂದು ಕೆ.ಜಿ ಟೊಮೆಟೊಗೆ ಸಮವಾಗಿರುತ್ತದೆ. ಹೀಗಾಗಿ, ಪೇಸ್ಟ್ ಬಳಕೆಗೆ ಹೋಟೆಲ್ ಮಾಲೀಕರು ಮೊರೆ ಹೋಗುತ್ತಿದ್ದಾರೆ ಎನ್ನುತ್ತಾರೆ ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ. ರಾವ್.


ಕೋಲಾರ ಸಗಟು ಮಾರುಕಟ್ಟೆಯಲ್ಲಿ 14 ಕೆ.ಜಿ. ತೂಕದ ಬಾಕ್ಸ್ 1,600 ರೂ.ಗೆ ಮಾರಾಟ

ಒಂದು ಟೊಮೆಟೊ ದರ ₹11.59!

ಹೋಟೆಲ್‌ಗಳು ಟೊಮೆಟೊ ಪೇಸ್ಟ್‌ನತ್ತ, ಗೃಹಿಣಿಯರು ಹುಣಸೆಹಣ್ಣಿನ ಮೊರೆ

ಎಚ್.ಪಿ. ಪುಣ್ಯವತಿ ಬೆಂಗಳೂರು
punyavthi.hp@timesgroup.com

ಆರೆ...ಟೊಮೆಟೊ ದರ ಇಳಿಕೆಯಾಯ್ತಾ ಎಂದು ಆಶ್ಚರ್ಯ ಪಡಬೇಡಿ. ಇದು ಕೆ.ಜಿ. ದರವಲ್ಲ, ಒಂದು ಹಣ್ಣಿನ ಬೆಲೆ. ಹೌದು, ಹಿಂದೆ ಒಂದು ಕೆ.ಜಿ. ಟೊಮೆಟೊ 5 ಅಥವಾ 10 ರೂ.ಗೆ ಸಿಗುತ್ತಿತ್ತು. ಈಗ ಒಂದು ಸಿಂಗಲ್ ಹಣ್ಣೂ ಆ ದರಕ್ಕೆ ಬರುತ್ತಿಲ್ಲ ಎಂದರೆ ಟೊಮೆಟೊ ದರ ಯಾವ ಮಟ್ಟಕ್ಕೆ ಏರಿಕೆಯಾಗಿದೆ ಎಂದು ಊಹಿಸಿಕೊಳ್ಳುವುದೂ ಅಸಾಧ್ಯ.

ಕೋಲಾರ ಟೊಮೆಟೊ ಎಪಿಎಂಸಿ ಸಗಟು ಮಾರುಕಟ್ಟೆಯಲ್ಲಿ 14 ಕೆ.ಜಿ. ತೂಕದ ಬಾಕ್ಸ್ 1,600 ರೂ.ಗೆ ಮಾರಾಟವಾಯಿತು. ಆದರಲ್ಲಿ 138ರಿಂದ 140 ಹಣ್ಣುಗಳಿದ್ದವು. ಅದರ ಆಧಾರದ ಮೇಲೆ ಲೆಕ್ಕ ಮಾಡಿದಾಗ ಒಂದು ಹಣ್ಣಿಗೆ 11.59 ರೂ. ಬಿತ್ತು. ಈ ಹಿಂದೆಯೂ ಒಮ್ಮೆ ದಾಖಲೆ ಪ್ರಮಾಣದಲ್ಲಿ ಟೊಮೆಟೊ ದರ ಏರಿಕೆಯಾಗಿದ್ದರೂ, ಈ ಸೀಸನ್‌ನಲ್ಲಿ ಇದೇ ಮೊದಲ ಬಾರಿಗೆ ದರದಲ್ಲಿ ದಾಖಲೆ ನಿರ್ಮಿಸಿದೆ. ಕಳೆದ 3 ದಿನಗಳಿಂದ ಇದೇ ಬೆಲೆ ಸ್ಥಿರಗೊಂಡಿದ್ದು, ಟೊಮೆಟೊಗೆ ಚಿನ್ನದ ಬೆಲೆ ಬಂದಿದೆ ಎನ್ನುತ್ತಾರೆ ಕೋಲಾರ ಎಪಿಎಂಸಿ ಟೊಮೆಟೊ ಹಣ್ಣಿನ ಸಗಟು ಮಾರುಕಟ್ಟೆ ರೈಟರ್ ಬಿ.ಎಂ. ಶ್ರೀನಿವಾಸ್.

ಸಗಟು ದರದಲ್ಲಿ ಬೆಲೆ ಏರಿಕೆ ಆಗಿರುವುದನ್ನು ಕಂಡು ಗ್ರಾಹಕರು ಹೌಹಾರುವಂತಾಗಿದ್ದರೆ, ಇತ್ತ ರೈತರ ಅದೃಷ್ಟವನ್ನೇ ಟೊಮೆಟೊ ಬದಲಾಯಿಸಿದೆ. ಒಂದು ಎಕರೆ ಟೊಮೆಟೊ ಬೆಳೆದಿರುವವರು ಲಕ್ಷಾಧಿಪತಿಗಳಾಗುತ್ತಿದ್ದಾರೆ. ದರ ಕುಸಿದಾಗ ಕಂಗಾಲಾಗಿ ರಸ್ತೆಗೆ ಸುರಿದು ಪ್ರತಿಭಟನೆ ಮಾಡುತ್ತಿದ್ದರು. ಈಗ, ಟೊಮೆಟೊ ಬೆಳೆದ ರೈತರಿಗೆ ಅದೃಷ್ಟಲಕ್ಷ್ಮಿ ಒಲಿದು ಬಂದಂತಾಗಿದೆ. ಆದರೆ, ಗ್ರಾಹಕರಿಗೆ ಬೆಲೆ ಏರಿಕೆಯ ಬಿಸಿ ತಟ್ಟಿದೆ. ಚಿಲ್ಲರೆ ದರದಲ್ಲಿ ಒಂದು ಕೆ.ಜಿ. ಹಣ್ಣಿಗೆ 100ರಿಂದ 130 ರೂ. ಇದೆ. ಅದು ಎರಡನೇ ದರ್ಜೆಯ ಹಣ್ಣಿಗೆ.

ಈಗ ಟೊಮೆಟೊ ಹಣ್ಣಿನ ಋತುಮಾನ. ಈ ಋತುವಿನಲ್ಲಿ ಕೋಲಾರ ಎಪಿಎಂಸಿಗೆ ನಿತ್ಯ 300 - 400 ಲೋಡ್ ಹಣ್ಣು ಬರುತ್ತಿತ್ತು. ಈ ಬಾರಿ 100 ಲೋಡು ಬರುತ್ತಿದೆ. ಸುಮಾರು 70ರಿಂದ 80 ಲೋಡ್‌ನಷ್ಟು ಉತ್ತಮ ದರ್ಜೆಯ ಹಣ್ಣು ಕೇರಳ ಹಾಗೂ ಗುಜರಾತ್‌ಗೆ ಪೂರೈಕೆಯಾಗುತ್ತಿದೆ. ಮೂರನೇ ದರ್ಜೆಯ ಹಣ್ಣುಗಳನ್ನು ಮಾತ್ರ ಸ್ಥಳೀಯವಾಗಿ ಮಾರಾಟ ಮಾಡಲಾಗುತ್ತದೆ.

ಈ ಬಾರಿ ಬೇಸಿಗೆಯಲ್ಲಿ ಅತಿಯಾದ ತಾಪಮಾನ ದಾಖಲಾಗಿತ್ತು. ಪರಿಣಾಮ, ಟೊಮೆಟೊ ಬೆಳೆಗೆ ಬಿಂಗಿ ರೋಗ ತಗುಲಿದ್ದರಿಂದ ಉತ್ಪಾದನೆ ಕುಂಠಿತಗೊಂಡು ಬೆಲೆ ಏರಿಕೆಯಾಗಿವೆ. ಶೇ.30 - 40ರಷ್ಟು ಹಣ್ಣು ಮಾತ್ರ ಎಪಿಎಂಸಿಗೆ ಬರುತ್ತಿದೆ. ಕೋಲಾರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಬೆಳೆದಿರುವ ಹಣ್ಣು ಮಾತ್ರ ಮಾರುಕಟ್ಟೆಗೆ ಬರುತ್ತಿದೆ. ಬೆಳಗ್ಗೆ ಬಂದ ಹಣ್ಣು ಮಧ್ಯಾಹ್ನ ಸುಮಾರು 12ಗಂಟೆಯ ಹೊತ್ತಿಗೆ ಖಾಲಿಯಾಗಿರುತ್ತದೆ ಎನ್ನುತ್ತಾರೆ ಸಗಟು ಮಾರುಕಟ್ಟೆಯ ರೈಟರ್ ಬಿ.ಎಂ. ಶ್ರೀನಿವಾಸ್.

ಹೊಸ ಬೆಳೆ ಬರುವವರೆಗೆ ಹಣ್ಣಿನ ಕೊರತೆ ಉಂಟಾಗಲಿದ್ದು, ಬೆಲೆಗಳು ಮತ್ತಷ್ಟು ಏರಿಕೆಯಾಗುವ ಸಾಧ್ಯತೆಯಿದೆ.

Vijayavani Pg.04

vittasuggi@gmail.com

ವಿತ್ತವಾಣಿ

ಮನೆ ಮನೆಯ ಮನಿಮಾತು

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » BENGALURU

4 ಸೋಮವಾರ 10 ಜುಲೈ 2023 10 JULY 2023



ಇಂದು ರಾಷ್ಟ್ರೀಯ ಮೀನು ಕೃಷಿಕರ ದಿನ

ಭಾರತ ಸರ್ಕಾರದ ಆದೇಶಾನ್ವಯ ಪ್ರತಿ ವರ್ಷ ಜುಲೈ 10ರಂದು ದೇಶಾದ್ಯಂತ ಮೀನುಗಾರಿಕೆಗೆ ಸಂಬಂಧಪಟ್ಟ ಸಂಘ-ಸಂಸ್ಥೆಗಳು 'ರಾಷ್ಟ್ರೀಯ ಮೀನು ಕೃಷಿಕರ ದಿನ'ವನ್ನು ಆಚರಿಸುತ್ತವೆ. ಡಾ.ಹೀರಾಲಾಲ್ ಚೌಧುರಿ ಮತ್ತು ಡಾ.ಕೆ.ಎಚ್.ಅಲಿಕುನ್ನಿ ಎಂಬಿಬ್ಬರು ವಿಜ್ಞಾನಿಗಳು ಐವತ್ತರ ದಶಕದ ಅಂತ್ಯದಲ್ಲಿ ಮೀನಿನ ಪಿಟ್ಯುಟರಿ ಗ್ರಂಥಿಯಿಂದ ತಯಾರಿಸಿದ ಹಾರ್ಮೋನನ್ನು ಬಳಸಿ ಕೃತಕ ವಿಧಾನದಿಂದ ಗೆಂಡೆ ಮೀನುಗಳನ್ನು ವಂಶಾಭಿವೃದ್ಧಿ ಮಾಡಿಸಿದ ನೆನಪಿಗಾಗಿ ಮೀನು ಕೃಷಿಕರ ದಿನ ಆಚರಿಸಲಾಗುತ್ತಿದೆ. ಭಾರತೀಯ ಮೀನುಗಾರಿಕಾ ರಂಗದಲ್ಲಿ ಹೊಸಕ್ರಾಂತಿಗೆ ನಾಂದಿ ಹಾಡಿದ ಮಹಾನ್ ವಿಜ್ಞಾನಿಗಳನ್ನು ನೆನೆಯುವ ಜತೆಗೆ, ಈ ಕಸುಬಿನಲ್ಲಿ ಮುಂದೆ ಸಾಗಬೇಕಾದ ವೈಜ್ಞಾನಿಕ ದಿಕ್ಕು-ದೆಸೆಗಳನ್ನು ಚರ್ಚಿಸಲು ಅವಕಾಶವನ್ನು ಈ ದಿನಾಚರಣೆ ಒದಗಿಸುತ್ತದೆ.

ಮೀನು ಕೃಷಿಗಿದೆ ವಿಪುಲ ಅವಕಾಶ

■ಡಾ.ಶಿವಕುಮಾರ್ ಮಗದ

ವೇಗವಾಗಿ ಬೆಳೆಯುತ್ತಿರುವ ಪ್ರಪಂಚದ ಜನಸಂಖ್ಯೆಗೆ, ಸಸಾರಜನಕದ ಕೊರತೆಯನ್ನು ಮೀನುಗಾರಿಕೆ ಕ್ಷೇತ್ರ ಮಾತ್ರ ನೀಗಿಸಬಲ್ಲದು. ಜಾಗತಿಕ ಹಸಿವು ಮತ್ತು ಅಪೌಷ್ಟಿಕತೆ ನೀಗಿಸುವಲ್ಲಿ ಮೀನುಗಾರಿಕೆ ಕ್ಷೇತ್ರದ ಪಾಲು ಗಮನಾರ್ಹ. ಜಾಗತಿಕವಾಗಿ, ಮೀನುಗಾರಿಕೆ ಕ್ಷೇತ್ರ 540 ಮಿಲಿಯನ್ ಅಂದರೆ ಪ್ರಪಂಚದ ಒಟ್ಟು ಜನಸಂಖ್ಯೆಯ ಶೇ.8 ಜನರಿಗೆ ಜೀವನಾಧಾರವಾಗಿದೆ (ವಿಶ್ವ ಆಹಾರ ಸಂಸ್ಥೆ ಮಾಧ್ಯಮ ಕೇಂದ್ರ, ಜನವರಿ-2022). ಆದರೆ, ಶೇ.80ಕ್ಕೂ ಹೆಚ್ಚು ಮೀನಿನ ಸಂತತಿಗಳು ವಿನಾಶದ ಅಂಚಿನಲ್ಲಿವೆ. ಕಡಲತೀರವುಳ್ಳ 9 ರಾಜ್ಯಗಳನ್ನು ಒಳಗೊಂಡ ಭಾರತವೂ ಮೀನುಗಾರಿಕೆ ಕ್ಷೇತ್ರದಲ್ಲಿ ಪ್ರಮುಖ ದೇಶ. ಪ್ರಪಂಚದಲ್ಲಿ ಮೀನಿನ ಒಟ್ಟು ಉತ್ಪಾದನೆ 178 ಮಿಲಿಯನ್ ಟನ್‌ಗಳಷ್ಟಿದೆ. ಭಾರತ 16.24 ಮಿ.ಟನ್(ಸಾಗರದಿಂದ 3.7 ಮತ್ತು ಸಿಹಿನೀರು ಮೀನುಕೃಷಿಯಿಂದ 12.54 ಮಿ.ಟ.) ಮೀನನ್ನು ಉತ್ಪಾದಿಸುತ್ತಿದ್ದು, ಜಾಗತಿಕವಾಗಿ ಮೀನುಗಾರಿಕೆಯಲ್ಲಿ ಮೂರನೇ ಸ್ಥಾನ ಮತ್ತು ಮೀನು ಕೃಷಿಯಲ್ಲಿ ಎರಡನೇ ಸ್ಥಾನದಲ್ಲಿದೆ. ನಮ್ಮ ದೇಶದಲ್ಲಿ ಮೀನು ಕೃಷಿಯ ಕ್ಷೇತ್ರ ವಾರ್ಷಿಕ ಶೇ.6ರಿಂದ 8ರಷ್ಟು ಬೆಳೆಯುತ್ತಿದೆ. ಮೀನು ಮತ್ತು ಮೀನಿನ ಉತ್ಪನ್ನಗಳನ್ನು 12.57 ಲಕ್ಷ ಟನ್‌ನಷ್ಟು ಸುಮಾರು 75 ರಾಷ್ಟ್ರಗಳಿಗೆ ರಫ್ತು ಮಾಡುತ್ತಿದ್ದು, 58 ಸಾವಿರ ಕೋಟಿ ರೂ. ವಿದೇಶಿ ವಿನಿಮಯದಿಂದ ಗಳಿಸುತ್ತಿದೆ. ಇದು ಕೃಷಿ ಉತ್ಪನ್ನಗಳ ರಫ್ತಿನ ಶೇ.20 ಮತ್ತು ದೇಶದ ಒಟ್ಟು ರಫ್ತಿನ ಶೇ.10 ಇದೆ. ವಿಶ್ವ ಆರೋಗ್ಯ ಸಂಸ್ಥೆಯ ಶಿಫಾರಸಿನಂತೆ ಪ್ರತಿವರ್ಷ ಮೀನಿನ ಲಭ್ಯತೆ 23 ಕೆ.ಜಿ.ಯಷ್ಟಿರಬೇಕು. ಆದರೆ ಭಾರತದ ವಾರ್ಷಿಕ ಮೀನಿನ ಲಭ್ಯತೆ 12.5 ಕೆ.ಜಿ.

ರಾಜ್ಯದಲ್ಲಿ 1.22 ಮಿಲಿಯನ್ ಟನ್ ಉತ್ಪಾದನೆ

2200 ಮೀನಿನ ತಳಿ: ಪ್ರಪಂಚದ ಮತ್ಸ್ಯವೈವಿಧ್ಯದ ಶೇ.10 ಅನ್ನು ಭಾರತ ಹೊಂದಿದೆ. ಉಪ್ಪುನೀರಿನ 1440, ಬೌಗುಳು ನೀರಿನ 143, ಸಿಹಿನೀರಿನ 544 ಮತ್ತು ಚಳಿಪ್ರದೇಶದ 73 ತಳಿಗಳೂ ಸೇರಿ 2200 ತಳಿಗಳನ್ನು ಹೊಂದಿದೆ. 30 ಮಿಲಿಯನ್ ಜನರಿಗೆ ಜೀವನಾಧಾರವಾಗಿರುವ ಈ ಕ್ಷೇತ್ರದಿಂದ ವಾರ್ಷಿಕ 33,534 ಕೋಟಿ ರೂ. ವಹಿವಾಟು ನಡೆಯುತ್ತಿದೆ. ಇದು ದೇಶದ ಒಟ್ಟು ಆಂತರಿಕ ಉತ್ಪಾದಕತೆಯ ಶೇ.1.07 ಮತ್ತು ಕೃಷಿ ಕ್ಷೇತ್ರದ ಒಟ್ಟು ಆಂತರಿಕ ಉತ್ಪಾದಕತೆಯ ಶೇ.5.4 ಇದೆ.

ನೀಲಿಕ್ರಾಂತಿ ಅವಶ್ಯ: ರಾಜ್ಯದಲ್ಲಿಯೂ ಮೀನುಗಾರಿಕೆಗೆ ವಿಪುಲ ಅವಕಾಶಗಳಿವೆ. ನಮ್ಮಲ್ಲಿ 300 ಕಿ.ಮೀ. ಕರಾವಳಿ ತೀರ, 9000 ಕಿ.ಮೀ.ಉದ್ದದಷ್ಟು ನದಿಗಳು 82 ಜಲಾಶಯಗಳು (ವಿಸ್ತೀರ್ಣ: 2.67 ಲ.ಹೆ.), 3399 ದೊಡ್ಡ ಕೆರೆಗಳು (ವಿಸ್ತೀರ್ಣ: 1.71 ಲ.ಹೆ.), 22,624 ಸಣ್ಣಕೆರೆಗಳು (ವಿಸ್ತೀರ್ಣ: 1.20 ಲ.ಹೆ.), 33,500ಕ್ಕೂ ಅಧಿಕ ಆಸಾಂಪ್ರದಾಯಿಕ ನೀರು

ಮತ್ಸ್ಯಸಂಪತ್ತು ರಕ್ಷಣೆ

ಭಾರತದ ಮೀನುಗಾರಿಕೆ ವಿಜ್ಞಾನಿಗಳು, ಅಧಿಕಾರಿಗಳು ಮತ್ತು ಇತರ ಸಂಬಂಧಿತ ಜನರು ಸಂಘಟಿತರಾಗಿ ಸ್ಪಷ್ಟಗುರಿಯೊಂದಿಗೆ ಯೋಜನಾಬದ್ಧವಾಗಿ ದುಡಿದು ಮತ್ಸ್ಯಸಂಪತ್ತನ್ನು ಸಂರಕ್ಷಿಸುತ್ತಾ ಪ್ರಗತಿ ಸಾಧಿಸಬೇಕು. ಈ ಮೀನುಕೃಷಿಕರ ದಿನಾಚರಣೆ ಸುಸ್ಥಿರ ಮೀನುಕೃಷಿಯನ್ನು ಅಭಿವೃದ್ಧಿಪಡಿಸುವತ್ತ ನಮ್ಮಲ್ಲಿ ಹೊಸ ಆಶಯಗಳನ್ನು ಸೃಷ್ಟಿಸಲಿ. ಆಶಯಗಳು ಕನಸಿನಂತೆ ಕಾಡಲಿ. ಕನಸು ನನಸಾಗಲಿ. ಜಲಚರಗಳ ವ್ಯವಹಾರದಲ್ಲಿ ಯಶಸ್ಸು ಆಕಸ್ಮಿಕ ಮತ್ತು ನಿರಂತರ ಕಠಿಕೆಯ ಮೇಲೆ ಅವಲಂಬಿತವಾಗಿರುತ್ತದೆ. ಲಾಭ ಮಾಡಿಕೊಳ್ಳುವ ಒಂದೇ ಉದ್ದೇಶದಿಂದ ಈ ಉದ್ಯಮದಲ್ಲಿ ಪಾಲ್ಗೊಳ್ಳಬಾರದು. ಜೀವ ಸಂಕುಲವನ್ನು ಪ್ರೀತಿಸಿ, ಪ್ರಕೃತಿಯನ್ನು ಗೌರವಿಸುವುದಾದರೆ, ಈ ಉದ್ಯಮಕ್ಕೆ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಶ್ವವಿದ್ಯಾಲಯ, ಬೀದರ್ ವ್ಯಾಪ್ತಿಗೆ ಬರುವ ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು, ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ ಮತ್ತು ಮೀನುಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ಮೀನುಗಾರಿಕೆಗೆ ಸಂಬಂಧಿಸಿದ ಎಲ್ಲ ಸಂಸ್ಥೆಗಳೂ ಜನರ ಜತೆಗೆ ಇರುತ್ತದೆ.



ಸಂಗ್ರಹಣಾ ತೊಟ್ಟಿಗಳಿವೆ. ಪ್ರಸ್ತುತ 0.5 ಮಿ.ಟನ್ ಸಿಹಿನೀರಿನಿಂದ ಮತ್ತು 0.72 ಮಿ.ಟನ್ ಕಡಲ ಮೀನುಗಾರಿಕೆಯಿಂದ ಉತ್ಪಾದನೆ ಆಗುತ್ತಿದೆ. ಆಂಧ್ರ ಪ್ರದೇಶ, ಹರ್ಯಾಣ, ಪಂಜಾಬ್, ಅಸ್ಸಾಂ, ಒಡಿಶಾ ಮತ್ತು ಪಶ್ಚಿಮ ಬಂಗಾಳದಲ್ಲಿ ಅದ



ನೀಲಿಕ್ರಾಂತಿ ನಮ್ಮ ರಾಜ್ಯದಲ್ಲೂ ಆಗಬೇಕಿದೆ. ಪ್ರಸ್ತುತ ರಾಜ್ಯದಲ್ಲಿ 1.22 ಮಿ.ಟನ್ ಮೀನಿನ ಉತ್ಪಾದನೆಯಿದ್ದು ತಲಾವಾರು ಬಳಕೆ ವರ್ಷಕ್ಕೆ 8.5 ಕೆ.ಜಿ. ಇದೆ. ಭಾರತದ ಸರಾಸರಿ (12.5 ಕೆ.ಜಿ)ಗಿಂತ ಕಡಿಮೆಯಿದೆ.

ಎಲ್ಲೆಡೆ ಮೀನು ಕೃಷಿ: ಇತರ ರಾಜ್ಯಗಳಿಗೆ ಹೋಲಿಸಿದರೆ, ರಾಜ್ಯದಲ್ಲಿ ಮೀನುಕೃಷಿ ನಿರೀಕ್ಷಿತ ಮಟ್ಟಕ್ಕೆ ಬೆಳೆದಿಲ್ಲ. ರಾಜ್ಯದಲ್ಲಿ 1 ಮಿಲಿಯನ್ ಹೆಕ್ಟೇರ್ ಬೌಗು ಮತ್ತು ಕ್ಷಾರಯುಕ್ತ ಪ್ರದೇಶವಿದೆ. ಇವುಗಳನ್ನು ಮೀನುಕೃಷಿಗೆ ಬಳಸಿಕೊಳ್ಳಬೇಕು. ತರಕಾರಿ ಮತ್ತು ಕಾಫಿ ಬೆಳೆಗಾರರು ಆಗಾಗ್ಗೆ ವಿಯವಾಗಿ ನೀರು ಹಾಯಿಸಲು ದೊಡ್ಡ ಕೃಷಿಹೊಂಡ ಮಾಡಿರುತ್ತಾರೆ. ಈ ರೀತಿಯ ಕೊಳಗಳು ರಾಜ್ಯದಲ್ಲಿ ಸಾವಿರಾರು ಇವೆ. ಇವುಗಳಲ್ಲಿ ಸೂಕ್ತ ಮೀನು ತಳಿಗಳನ್ನು ಬೆರೆಸಿ ಮಾಡಬಹುದು. ಯಾವುದೇ ಕಾರಣಕ್ಕೂ ಆಫ್ರಿಕನ್ ಕ್ಯಾಟ್‌ಫಿಶ್ ಬೆಳೆಯಬಾರದು. ಅದು ಕಾನೂನು ಬಾಹಿರ.

ಮೀನುಕೃಷಿಗೆ ಬೇಕಿರುವುದು ಸೂಕ್ತ ತಂತ್ರಜ್ಞಾನಗಳ ಪರಿಚಯ, ಮಾರುಕಟ್ಟೆ ಇತಿಮಿತಿ, ವೈಯಕ್ತಿಕ ಶಕ್ತಿ, ಆರ್ಥಿಕ ನೆರವು ಇತ್ಯಾದಿ. ವೈಯಕ್ತಿಕ ಶಕ್ತಿಯಿಂದ ಮೀನು ಕೃಷಿಯಲ್ಲಿ ಯಶಸ್ಸು ಕಂಡ ಅನೇಕರಿದ್ದಾರೆ. ವಿವಿಗಳು, ಇತರ ಸಂಘ- ಸಂಸ್ಥೆಗಳು ಒಂದು ಮಟ್ಟದವರೆಗೆ ನೆರವಾಗಬಹುದು. ಆದರೆ ಯಶಸ್ಸಿಗೆ ಬೇಕಾದ ಇತರ ವೈಯಕ್ತಿಕ ಗುಣ ಬೆಳೆಸಿಕೊಳ್ಳದೆ, ಈ ಉದ್ಯಮದಲ್ಲಿ ಪಾಲ್ಗೊಳ್ಳಬಾರದು.

ಅಡ್ಡದಾರಿಗಳಿಂದ ಬಾಧೆ: ಅವ್ಯವಸ್ಥಿತ ನಿರ್ವಹಣೆಯಿಂದ ಮತ್ಸ್ಯಸಂಪನ್ಮೂಲವನ್ನು ನಾವು ಹಾಳುಗೆಡವಿದ್ದೇವೆ. ಇದರ ಪರಿಣಾಮದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಹೆಚ್ಚುತ್ತಿರುವ ದೋಣಿಗಳ ಸಂಖ್ಯೆ, ಇಳಿಮುಖವಾಗುತ್ತಿರುವ ಉತ್ಪಾದನೆ, ನಡ್ಡಕಡ್ಡಿನ ಬಲೆಯ ಬಳಕೆ, ಕೆಲವೆಡೆ ಮಳೆಗಾಲದ ಮೀನುಗಾರಿಕೆ, ನಿಷೇಧಿತ ಪದ್ಧತಿಗಳಿಂದ ಮೀನುಗಾರಿಕೆ, ವಿದೇಶಿ ಮತ್ಸ್ಯಗಳ್ಳರ ಹಾವಳಿ, ಪರಿಸರ ಮಾಲಿನ್ಯದಂತಹ ಸಮಸ್ಯೆಗಳು ಕಡಲ ಮೀನುಗಾರಿಕೆಯನ್ನು ಬಾಧಿಸಿದರೆ, ಮೀನುಕೃಷಿಯಲ್ಲಿ ಏರುತ್ತಿರುವ ಆಗತ್ಯ ವಸ್ತುಗಳ ಬೆಲೆ, ಉತ್ತಮ ಮೀನು ಮರಿಗಳ ಕೊರತೆ, ಮಧ್ಯವರ್ತಿಗಳ ಕಾಟ, ಸಾಂಧ್ರ ಕೃಷಿಯಲ್ಲಿ ಹೊಸ ರೋಗಗಳು, ಪಾಕು, ತಿಲಾಪಿಯ ಮತ್ತು ಆಫ್ರಿಕನ್ ಕ್ಯಾಟ್ ಫಿಶ್ ಕೃಷಿಕರು ಸಾಗುತ್ತಿರುವ ಅಡ್ಡದಾರಿಗಳು ಬಾಧಿಸುತ್ತಿವೆ. ಇತ್ತೀಚೆಗೆ ಸಿಗದಿ ಕೃಷಿ ಮತ್ತು ಪಂಜರ ಕೃಷಿಗಳಲ್ಲಿ ಹಲವಾರು ಉದ್ಯಮಿಗಳು, ರೈತರು ಪಾಲ್ಗೊಳ್ಳುತ್ತಿದ್ದರೂ, ಈ ಉದ್ಯಮಗಳು ಕೂಡ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿವೆ. ಹಾಗೆಂದು ಯಾರೂ ವಿಮುಖರಾಗಬೇಕಿಲ್ಲ. ವೈಜ್ಞಾನಿಕ ವಿಚಾರ, ಆರ್ಥಿಕತೆಯ ಅರಿವು, ವ್ಯವಹಾರಿಕ ಜಾಣ್ಮೆಯಿದ್ದರೆ ಗೆಲುವು ಖಚಿತ.

ಕರಾವಳಿ ಜಿಲ್ಲೆಗಳಲ್ಲಿ ತಲಾವಾರು ಹಿಡುವಳಿ ಜಮೀನು ಕಡಿಮೆ ಇರುವುದರಿಂದ ಮತ್ತು ಸಿಹಿನೀರಿನ ಮೀನುಗಳಿಗೆ ಬೇಡಿಕೆ ಇಲ್ಲದ ಕಾರಣ, ಹೆಚ್ಚು ರೈತರು ಸಿಹಿನೀರಿನ ಮೀನು ಕೃಷಿಗೆ ಆಸಕ್ತಿ ವಹಿಸುತ್ತಿಲ್ಲ. ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು, ಕೃಷಿ ವಿಜ್ಞಾನ ಕೇಂದ್ರಗಳ ಪ್ರಯತ್ನಗಳಿಂದ ಇತ್ತೀಚೆಗೆ ಆಸಕ್ತಿ ಹೆಚ್ಚುತ್ತಿದೆ. ರೈತರು ಕೃಷಿ ಹೊಂದ, ಇಟ್ಟಿಗೆ ತೆಗೆದ ಗುಂಡಿ, ಹಡಿಲು ಜಮೀನು, ಕಿಂಡಿ ಅಣೆಕಟ್ಟುಗಳಲ್ಲಿ ಮತ್ತು ಬಾವಿಗಳಲ್ಲಿ ಮನೆ ಬಳಕೆಗೆ ಮೀನನ್ನು ಬೆಳೆದುಕೊಳ್ಳಬಹುದು. ಹೆಚ್ಚು ಉತ್ಪಾದನೆ ಬಂದರೆ ಸ್ಥಳೀಯವಾಗಿ ಮಾರಬಹುದು. ಕಳೆದ ಮೂರು ವರ್ಷಗಳಿಂದ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆ ಜಾರಿಯಲ್ಲಿದ್ದು 50ಕ್ಕೂ ಹೆಚ್ಚು ವಿವಿಧ ಯೋಜನೆಗಳು ಮೀನುಗಾರಿಕೆ ಇಲಾಖೆಯಲ್ಲಿ ಲಭ್ಯವಿದೆ. ಆಸಕ್ತ ರೈತರು ಸ್ಥಳೀಯ ಮೀನುಗಾರಿಕೆ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬಹುದು.

(ಲೇಖಕರು ಪ್ರಾಧ್ಯಾಪಕರು, ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು)

ವಿ ರೈತ ಮಿತ್ರ

■ಈರುಳ್ಳಿ ಬೀಜವನ್ನು ನಾಟಿ ಮಾಡಲು ಅನುಸರಿಸುವ ವಿಧಾನಗಳನ್ನು ತಿಳಿಸಿ.

| ರಾಜು ಮೈಸೂರು

ಈರುಳ್ಳಿ ಬೆಳೆಯಲು ಬಿತ್ತನೆ ಬೀಜವನ್ನು ಬೆಲ್ಲುವುದಾದರೆ/ಕೂರಿಗೆ ಬಿತ್ತನೆ ಮಾಡುವುದಾದರೆ 8-10 ಕಿ.ಗ್ರಾಂ, ಸಸಿ ನಾಟಿ ಮಾಡುವುದಾದರೆ 3-4 ಕಿ.ಗ್ರಾಂ ಬಿತ್ತನೆ ಬೀಜ ಅಥವಾ ಗಡ್ಡೆ ನಾಟಿ ಮಾಡುವುದಾದರೆ 350 ಕಿ.ಗ್ರಾಂ ಬಿತ್ತನೆ ಗಡ್ಡೆ ಪ್ರತಿ ಎಕರೆಗೆ ಬೇಕಾಗುತ್ತದೆ. ಪ್ರತಿ ವಿಧಾನದಲ್ಲೂ ನಾಟಿ ಮಾಡಿದ ತಕ್ಷಣ ನೀರು ಹಾಯಿಸಬೇಕು.

ನಾಟಿ ಮಾಡುವ ವಿಧಾನ

1 **ಬೆಲ್ಲುವುದು:** ಸಾವಯವ ಮತ್ತು ರಾಸಾಯನಿಕ ಗೊಬ್ಬರವನ್ನು ಶಿಫಾರಸು ಮಾಡಿದ ಪ್ರಮಾಣದಲ್ಲಿ ಜಮೀನಿಗೆ ಸೇರಿಸಿ 4ಗಿ4 ಅಡಿ ಅಂತರದ ಮಡಿಗಳನ್ನು ಮಾಡಿ ತೆಳ್ಳಗೆ ಬೀಜವನ್ನು ಬೆಲ್ಲುವುದು. ಬೀಜ ಬೆಲ್ಲಿದ 4 ವಾರಗಳ ನಂತರ 5 ಸೆಂ.ಮೀ.ಗೆ ಒಂದು ಸಸಿಯನ್ನುಳಿಸಿ ಉಳಿದವುಗಳನ್ನು ಕಿತ್ತು ತೆಗೆಯಬೇಕು.

2 **ಕೂರಿಗೆ ಬಿತ್ತನೆ:** ಭೂಮಿ ಹದ ಮಾಡಿ, ಗೊಬ್ಬರಗಳನ್ನು ಮಣ್ಣಿನಲ್ಲಿ ಸೇರಿಸಿ ಬೀಜವನ್ನು 30 ಸೆಂ.ಮೀ. ಅಂತರದ ಸಾಲಿನಲ್ಲಿ ಕೂರಿಗೆಯಿಂದ ಬಿತ್ತನೆ ಮಾಡಬೇಕು.

3 **ಸಸಿ ನಾಟಿ:** ಸಸಿಮಡಿಗಳನ್ನು ತಯಾರಿಸಿ 7.5 ಸೆಂ.ಮೀ. ಅಂತರದ ಸಾಲುಗಳಲ್ಲಿ ಬೀಜಗಳನ್ನು ಬಿತ್ತಿ ನೀರುಣಿಸಬೇಕು. ಬಿತ್ತಿದ 6-8 ವಾರಗಳಲ್ಲಿ ಸಸಿಗಳು ನಾಟಿ ಮಾಡಲು ಸಿದ್ಧವಾಗುತ್ತವೆ. ನಂತರ ಗೊಬ್ಬರಗಳನ್ನು ಕೊಟ್ಟು ಸಿದ್ಧಪಡಿಸಿದ ಜಮೀನಿನಲ್ಲಿ 15 ಸೆಂ. ಮೀ. ಅಂತರದ ಸಾಲುಗಳಲ್ಲಿ 10 ಸೆಂ. ಮೀ. ಗೆ ಒಂದರಂತೆ ನಾಟಿ ಮಾಡಬೇಕು.

4 **ಗಡ್ಡೆ ನಾಟಿ:** ಈ ವಿಧಾನವನ್ನು ಗೊಂಬಲಾಗಿ ಬೀಡುವ ಈರುಳ್ಳಿ ತಳಿಗಳಲ್ಲಿ ಅನುಸರಿಸುತ್ತಾರೆ. ಚೆನ್ನಾಗಿ ಹದ ಮಾಡಿದ ಜಮೀನಿನಲ್ಲಿ ಶಿಫಾರಸು ಮಾಡಿದ ಪ್ರಮಾಣದಲ್ಲಿ ಸಾವಯವ ಮತ್ತು ರಸಗೊಬ್ಬರಗಳನ್ನು ಸೇರಿಸಿ, ನಂತರ 15 ಸೆಂ. ಮೀ. ಅಂತರದ ಬೋದುಗಳನ್ನು ಮಾಡಿ ಬೋದಿವಿನ ಒಂದು ಪಕ್ಕದಲ್ಲಿ ಪ್ರತಿ 10 ಸೆಂ.ಮೀ. ಗೆ ಒಂದರಂತೆ ಗಡ್ಡೆ ನಾಟಿ ಮಾಡುತ್ತಾರೆ.

| ಡಾ. ಶಾಲಿನಿ ಎಂ. ತೋಟಗಾರಿಕೆ ತಜ್ಞರು

■ಸೌತೆಕಾಯಿ ಬೆಳೆಯಲ್ಲಿ ಕೆಂಪು ಕುಂಬಳ ದುಂಬಿಯ ಬಾಧೆ ಹೆಚ್ಚಾಗುತ್ತಿದ್ದು, ಇದನ್ನು ನಿಯಂತ್ರಿಸುವುದು ಹೇಗೆ?

| ಶಂಕರ್ ಕೋಲಾರ



-ದುಂಬಿಗಳು ಎಲೆಗಳನ್ನು ತೂತು ಮಾಡಿ ತಿನ್ನುತ್ತವೆ. ಮರಿಹುಳುಗಳು ಬೇರುಗಳನ್ನು ತಿನ್ನುತ್ತವೆ. ಅಂತಹ ಬೇರುಗಳು ಕೊಳೆತಂತಾಗಿ ಗಿಡಗಳ ಬೆಳವಣಿಗೆ ಕುಂಠಿತವಾಗುತ್ತದೆ.

ನಿರ್ವಹಣೆ: ಬಿತ್ತನೆಯಾದ 3 ವಾರಗಳ ನಂತರ ಬೆಳೆಗೆ 2.0 ಮಿ. ಲೀ. ಕ್ಲೋರೋಪೈರಿಫಾಸ್ 20 ಇ. ಸಿ. ಒಂದು ಲೀಟರ್ ನೀರಿನಲ್ಲಿ ಕರಗಿಸಿ ಸಿಂಪಡಿಸಬೇಕು. ಬೆಳೆಯಲ್ಲಿ ಕೀಟಗಳ ಬಾಧೆ ಮುಂದುವರಿದರೆ ಬಿತ್ತನೆಯಾದ 5, 8 ಮತ್ತು 11 ವಾರಗಳಲ್ಲಿ 2.0 ಮಿ.ಲೀ. ಮೆಲಾಥಿಯಾನ್ 50 ಇ.ಸಿ. ಆನ್ನು ಒಂದು ಲೀಟರ್ ನೀರಿನಲ್ಲಿ ಸೇರಿಸಿ ಸಿಂಪಡಿಸಬೇಕು.

| ಪ್ರಿಯಾಂಕಾ ಬಿ. ಸಸ್ಯರೋಗ ತಜ್ಞರು

■ಟೊಮ್ಯಾಟೊಗೆ ಪರ್ಯಾಯವಾಗಿ ಹುಣಸೆ ಹಣ್ಣನ್ನು ಬಳಸಬಹುದೇ?

| ವನಿತಾ ಬೆಂಗಳೂರು

- ಹುಣಸೆ ಹಣ್ಣು ಪ್ರತಿಯೊಬ್ಬರ ಅಡುಗೆ ಮನೆಯಲ್ಲಿ ಕಾಣಬಹುದಾದ ಒಂದು ಆಹಾರ ಪದಾರ್ಥ. ಹುಣಸೆ ಹಣ್ಣಿನಲ್ಲಿ ಹೆಚ್ಚಿನ ಜೀವನತ್ವವಾದ ಸಿ, ಬಿ ಮತ್ತು ಇ ಹಾಗೂ ಖನಿಜಾಂಶಗಳಾದ ಕಬ್ಬಿಣ, ಮೆಗ್ನೀಷಿಯಂ, ರಂಜಕ, ಪೊಟ್ಯಾಷಿಯಂ ಅಂಶಗಳು ಇರುತ್ತವೆ. ಇದು ಆರೋಗ್ಯದ ದೃಷ್ಟಿಯಲ್ಲೂ ಮಹತ್ವದ ಸ್ಥಾನ ಪಡೆದಿದೆ. ಹುಣಸೆ ಹಣ್ಣಿನಲ್ಲಿ ಆ್ಯಂಟಿ ಆಕ್ಸಿಡೆಂಟ್ ಮತ್ತು ನಾರಿನಾಂಶ ಹೊಂದಿರುವುದರಿಂದ ಕ್ಯಾನ್ಸರ್‌ನಂತಹ ಕಾಯಿಲೆಗಳನ್ನು ತಡೆಗಟ್ಟುತ್ತದೆ. ಪ್ರಸ್ತುತ ಟೊಮ್ಯಾಟೊ ದರದಲ್ಲಿ ಏರಿಕೆ ಇರುವುದರಿಂದ ಹುಣಸೆಹಣ್ಣನ್ನು ದಿನನಿತ್ಯದ ಆಹಾರ ತಯಾರಿಕೆಯಲ್ಲಿ ಬಳಸಬಹುದು. ಹುಣಸೆ ಹಣ್ಣನ್ನು ಸಾಂಬಾರು, ಪಲ್ಯ, ಗೊಜ್ಜು, ರಸಂ, ತೊಕ್ಕು, ಆರೋಗ್ಯಕರವಾದ ಶರಬತ್ ಇತ್ಯಾದಿಗಳಲ್ಲಿ ಬಳಕೆ ಮಾಡಬಹುದು. ಮೌಲ್ಯವರ್ಧಿತ ಹುಣಸೆ ಹಣ್ಣಿನ ತಿರುಳು (ಪೇಸ್ಟ್) ಹಾಗೂ ಪೌಡರ್‌ಗಳನ್ನು ಕೃಷಿ ಆಧಾರಿತ ಕಿರು ಉದ್ದಿಮೆಯಲ್ಲಿ ತಯಾರಿಸಿ ಬಳಕೆ ಮಾಡಬಹುದು.

| ಡಾ. ಕಲ್ಪನಾ ಬಿ. ಪ್ರಾಧ್ಯಾಪಕರು ಮತ್ತು ರಾಜ್ಯ ನೋಡಲ್ ಅಧಿಕಾರಿ (ರೇಸಿ)

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು. ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

MSP formula brings losses to farmers: Report

KAPC says Centre is underestimating costs

CHIRANJEEVI KULKARNI
BENGALURU, DHNS

The Karnataka Agricultural Price Commission (KAPC), which has been urging the government to adopt the M S Swaminathan formula to calculate the minimum support price (MSP), says that even the watered-down version of the MSP adopted by the Centre grossly underestimates the cost borne by farmers.

The commission's report for 2021-22 was finalised in February 2023 and released recently. Officials cited the general elections for the delay.

The current MSP formula, set by the Union government's Commission for Agricultural Costs and Prices (CACP), fixes the price for a crop as 50% more than the cultivation expenditure, land lease cost and family labour cost.

The KAPC's calculations show that the Centre is underestimating the cost incurred by the farmers. "The expenditure incurred by farmers in the state is higher than the national average for almost all crops," it said.

To demonstrate this, the KAPC gave its own calculation by using the Centre's conservative formula, but without including the land lease cost or live cost. Even then, the cost of growing a quintal of ragi was Rs 3,935 whereas the CACP calculations brought it down to Rs 2,385.

If the land lease cost is included (as suggested by the Swaminathan report), the KAPC's total cost for ragi would go up to Rs 5,286 whereas the CACP's formula put the price at Rs 3,198

Vishwavani Pg.Spl 03



ಮಳೆಗಾಲದ ಖಾದ್ಯ ರಕ್ಷಿಸುತ್ತೆ ಆರೋಗ್ಯ

• ಅಶ್ವಿನಿ ಸುನೀಲ್

ವಿಪರೀತ ಮಳೆ, ಚಳಿ ಇರುವ ಆಷಾಢ ತಿಂಗಳು, ನಮ್ಮ ಬದುಕಿನಲ್ಲಿ ಒಂದು ಪರ್ವಕಾಲ. ಹೆಚ್ಚಿನ ಕೆಲಸ ಇಲ್ಲದೇ, ಮಳೆ, ಚಳಿಯಲ್ಲಿ ಕಾಲ ಕಳೆಯಬೇಕಾದ ಪರಿಸ್ಥಿತಿ. ಇಂತಹ ಕಷ್ಟಕರ ಆಷಾಢವನ್ನು ಎದುರಿಸಲು ಹಿರಿಯರು ಹಲವು ನಿಯಮ, ರೂಢಿಗಳನ್ನು ಮಾಡಿಕೊಂಡಿದ್ದಾರೆ. ಇವುಗಳನ್ನು ಪಾಲಿಸಿದರೆ ಆಷಾಢ ಸಹ್ಯ ಎನಿಸೀತು.

ಈ ವರ್ಷ ಮಳೆಗಾಲ ತುಸು ತಡವಾಗಿ ಆರಂಭವಾದರೂ, ಒಮ್ಮೆಗೇ ಸುರಿಯತೊಡಗಿದೆ. ಈಗ ಆಷಾಢ. ಚಳಿ, ಮಳೆಗಳೇ ತುಂಬಿಕೊಂಡಿರುವ ಕಾಲ ಇದು. ಆಷಾಢಮಾಸದಲ್ಲಿ ಮಳೆಯ ಆರ್ಭಟ ಹೆಚ್ಚಾಗಿರುವ ಕಾರಣ ಆ ಸಮಯದಲ್ಲಿ ಯಾವುದೇ ಕಾರ್ಯಗಳನ್ನು ನಡೆಸಿದರೆ ಅದನ್ನು ನಿರ್ವಹಿಸುವುದು ಕಷ್ಟಕರ. ಅದರ ಜೊತೆಗೆ ಕೃಷಿ ಚಟುವಟಿಕೆಗಳು ಹೆಚ್ಚಾಗಿರುವುದರಿಂದ, ರೈತರಿಗೆ ಆಷಾಢ ಮಾಸದಲ್ಲಿ ಹೊಲಗದ್ದೆಗಳಲ್ಲಿ ಹೆಚ್ಚಿನ ಕೆಲಸವಿರುವುದರಿಂದ, ಮಾಸದಲ್ಲಿ ಶುಭ ಕಾರ್ಯಗಳನ್ನು ನಡೆಸುವುದು ಕಡಿಮೆ.

ತುಳುವಿನಲ್ಲಿ ಆಟಿ ತಿಂಗಳು ಎಂದು ಕರೆಸಿಕೊಳ್ಳುವ ಆಷಾಢಮಾಸ ಬಹಳ ಕಷ್ಟಕರವಾದ ತಿಂಗಳು ಎಂಬುದು ನಂಬಿಕೆ. ಮಲೆನಾಡು ಕರಾವಳಿ ಪ್ರದೇಶಗಳಲ್ಲಿ ನಿರಂತರವಾಗಿ ಸುರಿಯುವ ಮಳೆಯು ವಿವಿಧ ರೋಗಗಳಿಗೆ ಕಾರಣವಾಗುತ್ತದೆ. ಹಾಗಾಗಿ ಆಷಾಢಮಾಸದಲ್ಲಿ ಆರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುವಂತ , ನೈಸರ್ಗಿಕವಾಗಿ ದೊರೆಯುವಂತಹ ತರಕಾರಿ, ಚಿಗುರು, ಗೆಡ್ಡೆ ಗೆಣಸು, ಆಹಾರ ಪದಾರ್ಥವನ್ನು ಸೇವಿಸುವುದು ರೂಢಿಯಾಗಿದೆ.

ಆಷಾಢದಲ್ಲಿ ಆರೋಗ್ಯವನ್ನು ಚೆನ್ನಾಗಿಟ್ಟುಕೊಳ್ಳಲು ಕೆಲವು ವಿಶೇಷ ಪದಾರ್ಥಗಳನ್ನು ಸೇವಿಸುವುದು ಉತ್ತಮ ಎಂದು ಅನುಭವ ಹೇಳಿಕೊಟ್ಟಿದೆ. ಇದು ಆರೋಗ್ಯಕ್ಕೂ ಪೂರಕ, ನಂಬಿಕೆಗೂ ಪೂರಕ.



ಹಾಲೆ ಕೆತ್ತೆಯ ಕಷಾಯ

ಕರಾವಳಿ ಭಾಗದಲ್ಲಿ ಆಟಿ ಅಮವಾಸ್ಯೆ ಎಂದು ಕರೆಸಿಕೊಳ್ಳುವ, ಭೀಮನ ಅಮಾವಾಸ್ಯೆ ಯಂದು ಹಾಲೆಮರದ ಕೆತ್ತೆಯಿಂದ ತಯಾರಿಸಿದ ಕಷಾಯವನ್ನು ಕುಡಿಯುವುದು ಸಂಪ್ರದಾಯ. ಹಿಂದೆ ಕರಾವಳಿ ಭಾಗದಲ್ಲಿ ಹೆಚ್ಚಾಗಿ ಕಾಡುತ್ತಿದ್ದ ಮಲೇರಿಯಾ ರೋಗಕ್ಕೆ ನೀಡುವ ಔಷಧದ ಅಂಶವಿರುವ ಈ ಹಾಲೆಮರದ ಕೆತ್ತೆಗೆ ಕರಿಮೆಣಸು, ಬೆಳ್ಳುಳ್ಳಿ , ಓಂಕಾಳು ಸೇರಿಸಿ, ಜಜ್ಜಿ ಕಷಾಯ ಮಾಡಿ ಮುಂಜಾನೆ ಖಾಲಿ ಹೊಟ್ಟೆಗೆ ಸೇವಿಸುವುದು ರೂಢಿ.

ಕಣಿಲೆ

ಬದಿರಿನ ಬಗ್ಗೆ ಎಲ್ಲರಿಗೂ ಎಲ್ಲರಿಗೂ ತಿಳಿದಿದ್ದರೂ, ಎಳೆ ಬದಿರಿನಿಂದ ತಯಾರಿಸುವ ಖಾದ್ಯಗಳ ಬಗ್ಗೆ ಹೆಚ್ಚಿನವರಿಗೆ ಗೊತ್ತಿಲ್ಲ. ಮಳೆಗಾಲದಲ್ಲಿ ಕರಾವಳಿ, ಮಲೆನಾಡಿನಲ್ಲಿ ಹೇರಳವಾಗಿ ಸಿಗುವ ಎಳೆಬದಿರು ಅಥವಾ ಕಣಿಲೆ ಯಿಂದ ತಯಾರಿಸಿದ ಪದಾರ್ಥಗಳು ರುಚಿಕರವಷ್ಟೇ ಅಲ್ಲ, ಆರೋಗ್ಯವರ್ಧಕವೂ ಹೌದು . ಕಣಿಲೆ ಯಲ್ಲಿ ಅತಿಹೆಚ್ಚಿನ ಪೋಷಕಾಂಶವಿದ್ದು , ಕಾರ್ಬೋಹೈಡ್ರೇಟ್ ಮಿತ ಪ್ರಮಾಣದಲ್ಲಿದೆ. ಹೇರಳವಾಗಿ ನಾರಿನಂಶವಿದೆ. ವಿಟಮಿನ್‌ಗಳು ಹೇರಳವಾಗಿದೆ. ಕಣಿಲೆಯಯು ಕೊಲೆಸ್ಟ್ರಾಲ್ ನಿಯಂತ್ರಣ ಕ್ಕೆ ಸಹಕಾರಿ. ಕಣಿಲೆಯಿಂದ ಸಾಂಬಾರ್, ಪಲ್ಯ, ಪತ್ರೊಡೆ ,ಉಪ್ಪಿನ ಕಾಯಿ ಹೀಗೆ ವಿವಿಧ ಖಾದ್ಯಗಳನ್ನು ತಯಾರಿಸಬಹುದು.

ಉಪ್ಪಿನಲ್ಲಿ ಹಾಕಿಟ್ಟ ಹಲಸಿನಕಾಯಿ ಉಪ್ಪು ನೀರಿನಲ್ಲಿ ಹಾಕಿದ್ದ ಹಲಸಿನಕಾಯಿಯ ತೊಳೆಗಳು ತಿಂಗಳುಗಟ್ಟಲೆ ಕೆಡದೆ ಇರುವುದರಿಂದ ಆಷಾಢದಲ್ಲಿ ತರಕಾರಿಯ ಕೊರತೆಯುಂಟಾದಾಗ ಉಪ್ಪು ನೀರಿನಲ್ಲಿ ಹಾಕಿದ ಹಲಸಿನ ತೊಳೆಗಳನ್ನು ಉಪಯೋಗಿಸಿ ವಿವಿಧ ಖಾದ್ಯಗಳನ್ನು ತಯಾರಿಸುತ್ತಾರೆ. ದೋಸೆ, ರೊಟ್ಟಿ, ಸಾಂಬಾರು ಮುಂತಾದ ಖಾದ್ಯಗಳನ್ನು ತಯಾರಿಸಲಾಗುತ್ತದೆ.

ಹಲಸಿನ ಬೀಜ

ಹಲಸಿನ ಬೀಜವನ್ನು ಶೇಖರಿಸಿಟ್ಟು, ಅದರಿಂದಲೂ ವಿವಿಧ ರೀತಿಯ ಅಡುಗೆ ಮಾಡಬಹುದು. ಹಲಸಿನ ಬೀಜದ ಸಾರು, ಸಾಂಬಾರು ತಯಾರಿಸಬಹುದು. ಹಲಸಿನ ಬೀಜದಲ್ಲಿ ವಿಟಮಿನ್ ಎ ಹೇರಳವಾಗಿದ್ದು ಇದು ಕಣ್ಣಿನ ಆರೋಗ್ಯಕ್ಕೆ ಸಹಕಾರಿ. ಜತೆಗೆ ಕೂದಲಿನ ಹಾಗೂ ಚರ್ಮ ದ ಆರೋಗ್ಯ ವನ್ನು ಕಾಪಾಡುವವಲ್ಲಿ ಸಹಕಾರಿ. ಹಲಸಿನ ಬೀಜವನ್ನು ಬೇಯಿಸಿ, ಹೋಳಿಗೆಯಂತಹ ಖಾದ್ಯವನ್ನು ಸಹ ಮಲೆನಾಡಿನವರು ತಯಾರಿಸುತ್ತಾರೆ.

ಚಗತೆ ಸೊಪ್ಪು

ಒಂದರಡು ಮಳೆ ಬಿದ್ದ ಕೂಡಲೇ ಖಾಲಿ ಜಾಗಗಳಲ್ಲಿ, ಗದ್ದೆ ಅಂಚಿನಲ್ಲಿ ಚಗತೆ ಸೊಪ್ಪು ಆರೋಗ್ಯಕರ. ರುಚಿಯಲ್ಲಿ ಒಗರಾಗಿದ್ದರೂ, ಹೇರಳವಾದ ಕಬ್ಬಿಣಾಂಶ ಹಾಗೂ ನಾರಿನಂಶ ಹೊಂದಿದೆ. ಚಗತೆ ಸೊಪ್ಪಿನಿಂದ ರುಚಿಕರವಾದ ಪತ್ರೊಡೆ, ತಂಬುಳಿ, ಸಾಂಬಾರುಗಳನ್ನು ತಯಾರಿಸಬಹುದು.



ಮರ ಕೆಸುವೆ

ಕೆಸುವಿನ ಎಲೆಯಲ್ಲಿ ಪೋಷಕಾಂಶ ಗಳು ಹೇರಳವಾಗಿದೆ. ಕಾಡಿನಲ್ಲಿ ನೆಲದ ಮೇಲೆ ಮತ್ತು ಹಳೆಯ ಮರದ ಮೇಲೆ ಬೆಳೆಯುವ ಮರಕೆಸು ಆರೋಗ್ಯಕರ. ಕೆಸುವಿನ ಎಲೆಯಲ್ಲಿ ವಿಟಮಿನ್ ಸಿ, ಕ್ಯಾಲ್ಸಿಯಂ,

ಕಬ್ಬಿಣಾಂಶ ಹೇರಳವಾಗಿದೆ. ಮರಕೆಸುವಿನಿಂದ ಪತ್ರೊಡೆಯನ್ನು ಮತ್ತು ದೋಸೆಯನ್ನು ತಯಾರಿಸುತ್ತಾರೆ. ಇದು ರುಚಿಕರ ಮತ್ತು ಮಾಮೂಲಿ ಕೆಸುವಿನಂತೆ, ಬಾಯಿ ತುರಿಕೆ ಆಗುವುದಿಲ್ಲ.

ಆಷಾಢವೆಂದರೆ ಅಶುಭವಲ್ಲ, ಹಳೆಯ ನಂಬಿಕೆಗೆ ಜೋತುಬಿದ್ದು ಆಷಾಢವು ಅಶುಭ ಎಂದು ಸುಮ್ಮನೆ ಕುಳಿತು ಕಾಲ ಹರಣ ಮಾಡಬಾರದು. ಆಷಾಡ ಮಾಸದಲ್ಲಿ ಪ್ರಕೃತಿ ಯಲ್ಲಿ ಸ್ವಾಭಾವಿಕವಾಗಿ ದೊರೆಯುವ, ಔಷಧೀಯ ಗುಣಗಳನ್ನು ಹೊಂದಿರುವ ಆಹಾರ ಪದಾರ್ಥಗಳನ್ನು ಬಳಸಿ ಆರೋಗ್ಯ ವನ್ನು ವೃದ್ಧಿಸಿಕೊಳ್ಳೋಣ.

MSP formula brings losses to farmers: Study

MSP, from Page 1

The KAPC further said that the Centre takes into account the arrivals and prices in controlled markets (APMCs) to calculate the MSP. However, data shows that only about 15% of the 369 lakh tonnes food and horticulture crops was sold in APMCs. "It's important to get the prices of the produce sold outside the controlled markets," the report said, adding that the Centre missed the real picture in the absence of the price range of 85% of the crops.

The Centre's underestimation led to its claim that the MSP provides 50% more than the cost of family labour and cost of cultivation. In reality, the MSP for paddy in rainfed area was 19% less than the cost of cultivation and family labour cost. Similarly, the MSP for jowar was -10%, hybrid jowar -16%, pearl millet -14%, urad dal -13% and tur -3%.

"Farmers growing ragi, jowar, pearl millet, tur dal, urad dal, groundnut, soya and sunflower have experienced losses. If the land lease amount is included, all farmers, except maize and chickpea growers, are suffering losses," it said.

The report noted that input costs vary in different states depending on the climate, soil condition and irrigation facilities. As a result, there was a difference between the weighted average adopted by the Centre and the real cost calculated by the KAPC.

"There is a huge difference between farmers' demand and the Centre's MSP. Considering this issue is necessary in view of the prime minister's ambitious announcement of doubling farmers' income," the report said.

Agro-economist T N Prakash Kammardi, who headed the KAPC earlier, said the state has the right to give bonus over and above the MSP fixed by the Centre to mitigate regional disparity. "It is well-known that one nation and one MSP doesn't work as costs vary depending on several factors. Now is the right time for such an intervention considering the increased procurement for the Anna Bhagya scheme," he said.

Kammardi also said that not just the MSP but the KAPC itself requires statutory support to ensure minimum powers to the commission. He said the report submitted by the KAPC needs to be validated as the commission did not have a competent technical person as the head.

"The KAPC has a big responsibility but requires powers to carry out its work," he added.

Deccan Herald Pg.04

Prajavani Pg.04

ಔಷಧೀಯ ಗುಣಗಳ ಹಾಲವಾಣ

ಡಾ. ಎಸ್. ಶಿಶುಪಾಲ



ಹಾಲವಾಣದ ಹೂವು -ಚಿತ್ರ: ಲೇಖಕರದ್ದು



ಗೇಣುದ್ದನೆಯ, ಮೇಲ್ನೆನಲ್ಲಿ ಗಂಟುಗಳಂತೆ ಕಾಣುವ ಕಾಯಿಯ ಸಿಪ್ಪೆ ಬಿಡಿಸಿ, ಅದರೊಳಗಿದ್ದ ಹಸಿ ಬೀಜ ತೆಗೆದು, ಬೀಜದ ಹೊಟ್ಟೆ ಕೊರೆದು ರಂಧ್ರ ಮಾಡಿ, ಬೆರಳಿಗೆ ಉಂಗುರ ಮಾಡಿಕೊಳ್ಳುತ್ತಿದ್ದು ನೆನಪಿದೆಯಾ..!

ಅದೇ ಬೀಜ ಒಣಗಿದ ಮೇಲೆ, ಅದನ್ನು ಕಲ್ಲಿಗೆ ಉಜ್ಜಿ ಪಕ್ಕದಲ್ಲಿದ್ದ ಗೆಳೆಯರ ಮೈಗೆ ತಾಗಿಸಿ, ಚುರುಗುಟ್ಟುವಂತಹ ಬಿಸಿ ತಾಕಿ ಅವರು 'ಹಾ..' ಎಂದಾಗ.. ಫುಲ್ ಖುಷಿಪಟ್ಟಿದ್ದು.. ನೆನಪಾಯ್ತಾ !

ನಿಜ. ಇದು ಹಾಲವಾಣ ಮರದ ಬೀಜದ ಕಥೆಯೇ. ಆದರೆ, ಇದು ಬಾಲ್ಯದ ಆಟಕ್ಕಷ್ಟೇ ಸೀಮಿತವಾಗಿಲ್ಲ.. ಆ ಮರದ ಬೀಜಗಳಿಗೆ ಔಷಧೀಯ ಗುಣವಿದೆ. ಇದನ್ನು ಭಾರತೀಯ ಹವಳದ ಮರ (ಇಂಡಿಯನ್ ಕೊರಲ್ ಟ್ರೀ) ಎಂದು ಕರೆಯುತ್ತಾರೆ. ಇದು ವೈಜ್ಞಾನಿಕವಾಗಿ ಎರಿತ್ರಿನಾ(Erythrina) ಕುಲಕ್ಕೆ ಸೇರಿದ್ದು, ಇದರಲ್ಲಿ ಸುಮಾರು 110 ಪ್ರಭೇದಗಳನ್ನು ಗುರುತಿಸಲಾಗಿದೆ. ಬಟಾಣಿ ಗಿಡದ ಕುಟುಂಬಕ್ಕೆ ಸೇರಿದ ಪ್ರಭೇದವಿದು. ದಕ್ಷಿಣ ಭಾರತದಲ್ಲಿರುವ ಹೂ ಬಿಡುವ ಸ್ಥಳೀಯ ಮರಗಳಲ್ಲೊಂದು. ಎಲೆ ಉದುರುವ ಕಾಡುಗಳಲ್ಲಿನ ಮರವಿದು.

ಗುಣಲಕ್ಷಣಗಳು: ಇದು ಮಧ್ಯಮ ಗಾತ್ರದ ಮರ. ಐದರಿಂದ ಹದಿನೈದು ಮೀಟರ್‌ವರೆಗೆ ವೇಗವಾಗಿ ಬೆಳೆಯುತ್ತದೆ. ಕೊಂಬೆಗಳು ಹತ್ತಿರದಲ್ಲಿರುತ್ತವೆ. ಕಾಂಡದ ಮೇಲೆ ನಯವಾದ ತೊಗಟೆಯಿದ್ದರೂ ಮುಳ್ಳುಗಳಿರುತ್ತವೆ. ಮೂರು ಪತ್ರೆಗಳಿರುವ ಎಲೆಗಳಲ್ಲಿ ತೊಟ್ಟು 15 ಸೆಂಮೀ ಇದ್ದು ಪತ್ರೆ ಏಳರಿಂದ 12ಸೆಂ.ಮೀ.ಅಗಲವಿರುತ್ತದೆ.ಪತ್ರೆಗಳು ಮೊಟ್ಟೆಯಾಕಾರದಲ್ಲಿರುತ್ತವೆ.

ಫೆಬ್ರುವರಿಯಿಂದ ಏಪ್ರಿಲ್‌ವರೆಗೆ ಹೂ ಬಿಡುವ ಕಾಲ. ಸುಮಾರು ಎರಡು ತಿಂಗಳವರೆಗೆ ಹೂಗಳು ಮರದಲ್ಲಿರುತ್ತವೆ. ಈ ಸಮಯದಲ್ಲಿ ಮರದಲ್ಲಿ ಎಲೆಗಳೇ ಇರುವುದಿಲ್ಲ. ಕೊಂಬೆಗಳ ತುದಿಯಲ್ಲಿ ಆಕರ್ಷಕ ಹೂಗಳು 10 ರಿಂದ 20 ಸೆಂ.ಮೀ. ಗಾತ್ರವಿದ್ದು ಗೊಂಚಲಿನಲ್ಲಿ ಬಿಡುತ್ತವೆ. ಆಕರ್ಷಕ ಢಾಳ ಕೆಂಪು ಅಥವಾ ಹವಳ ಕೆಂಪಿನ ಸುಂದರ ಹೂವುಗಳು. ತುದಿ ಚೂಪಾಗಿರುವ ಹಣ್ಣುಗಳು ಏಳರಿಂದ 15 ಸೆಂಮೀಗಳಷ್ಟು ಉದ್ದವಿರುತ್ತವೆ (ಚಿತ್ರದ ಬಲಭಾಗದಲ್ಲಿವೆ). ಮೊದಲಿಗೆ ಕಾಯಿ ಹಸಿರಾಗಿದ್ದು ಕ್ರಮೇಣ ಕಡು-ಕಂದು ಬಣ್ಣದ್ದಾಗುತ್ತದೆ. ಬೀಜಗಳು ಮೂತ್ರಕೋಶದ ಆಕಾರದಲ್ಲಿರುತ್ತವೆ. ಒಂದು ಹಣ್ಣಿನಲ್ಲಿ 12ರ ತನಕ ಬೀಜಗಳಿರುತ್ತವೆ.

ಉಪಯೋಗಗಳು: ಉಪಯುಕ್ತ ನೆರಳಿನ ಮರ. ಹೂಗಳ ಅಂದಕ್ಕಾಗಿ ಈ ಮರವನ್ನು ಬೆಳೆಸಲಾಗುತ್ತದೆ. ಹೊಸ ಎಲೆಗಳನ್ನು ಪಲ್ಯಕ್ಕಾಗಿ ಉಪಯೋಗಿಸುತ್ತಾರೆ. ಎಲೆಗಳು ಚಳಿಗಾಲದವರೆಗೆ ಇರುತ್ತವೆ. ಆಯುರ್ವೇದ ಮತ್ತು ಸಿದ್ಧ ಔಷಧಿಗಳಲ್ಲಿ ಜ್ವರ ಮತ್ತು ಕರುಳು ಹುಳು ನಿವಾರಕವಾಗಿ ಬಳಕೆಯಲ್ಲಿದೆ. ಆಸ್ತಮಾ, ಕೆಮ್ಮು, ಋತುಚಕ್ರದ ಅಸ್ವಸ್ಥತೆ ಮುಂತಾದ ಆರೋಗ್ಯ ಸಮಸ್ಯೆಗಳಿಗೆ ಉಪಯುಕ್ತ. ಸಸ್ಯದಲ್ಲಿರುವ ಆಲ್ಕಲೈಡ್ ಮತ್ತು ಫ್ಲವೊನೈಡ್ ಎಂಬ ರಾಸಾಯನಿಕಗಳನ್ನು ಉರಿಯೂತ ನಿವಾರಣೆ ಮತ್ತು ಪ್ರತಿಜೀವಕಗಳಾಗಿಯೂ ಉಪಯೋಗಿಸುವರು.

ಹಾಲವಾಣ ಮರಗಳನ್ನು ಕಾಫಿ ಮತ್ತು ಚಹಾ ತೋಟಗಳಲ್ಲಿ ನೆರಳಿಗಾಗಿ ಬೆಳೆಸುತ್ತಾರೆ. ವೀಳ್ಯದೆಲೆ ಮತ್ತಿತರ ಬಳ್ಳಿಗಳಿಗೆ ಆಶ್ರಯ ಮರವಾಗಿಯೂ ಬಳಸಲಾಗುವುದು. ಮರದ ಕಾಂಡದಿಂದ ಗೊಂಬೆಗಳನ್ನು ತಯಾರಿಸಲಾಗುತ್ತದೆ. ತೊಗರಿ, ಹೆಸರು ಮುಂತಾದ ದ್ವಿದಳ ಸಸ್ಯಗಳ ಕುಟುಂಬಕ್ಕೆ ಸೇರಿದ ಮರವಾದ್ದರಿಂದ ಬೇರಿನಲ್ಲಿ ಸಾರಜನಕ ಹಿಡಿದಿಡುವ ಬ್ಯಾಕ್ಟಿರೀಯಾಗಳಿಗೆ ಆಶ್ರಯತಾಣ. ಹಾಗಾಗಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ಸಹಕಾರಿ. ಬೀಜಗಳಿಂದ ಅಥವಾ ಕೊಂಬೆಗಳಿಂದ ಗಿಡವನ್ನು ಬೆಳೆಸಬಹುದು.

ಭಾರತದಲ್ಲಿ ಮಾತ್ರ ಕಾಣಸಿಗುವ ಸ್ಥಳೀಯ ಪ್ರಭೇದವಾಗಿದ್ದು ಕರ್ನಾಟಕ, ಬಿಹಾರ, ಪಶ್ಚಿಮ ಬಂಗಾಳ, ಅಂಡಮಾನ್-ನಿಕೋಬಾರ್ ದ್ವೀಪ ಸಮೂಹಗಳ ಕಾಡುಗಳಲ್ಲಿ ಬೆಳೆಯುತ್ತದೆ. ದೇಶದ ಅಭಿವೃದ್ಧಿ ಅಲ್ಲಿರುವ ನೈಸರ್ಗಿಕ ಸಂಪತ್ತು ಮತ್ತು ವಾತಾವರಣವನ್ನು ಅವಲಂಬಿಸಿದೆ. ಬಣ್ಣದ ಹೂಗಳಿರುವ ಮರಗಳು ಎಲ್ಲರ ಮನಸ್ಸಿಗೆ ಆಹ್ಲಾದವನ್ನು ಉಂಟುಮಾಡುತ್ತವೆ. ಜೊತೆಗೆ ಆರೋಗ್ಯಕರ ಪರಿಸರ ನಿರ್ಮಾಣವಾಗುವುದು. ಜೈವಿಕ ಅಲಂಕಾರ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಾಗ ಸ್ಥಳೀಯ ಪ್ರಭೇದಗಳಿಗೆ ಆದ್ಯತೆ ನೀಡಬೇಕೆಂದು ಪರಿಸರ ತಜ್ಞರ ಅಭಿಪ್ರಾಯ. ಹಾಲವಾಣದಂತಹ ಮರಗಳು ಇದಕ್ಕೆ ಸೂಕ್ತವಾದದ್ದು. ಇಂತಹ ಬಹುಪಯೋಗಿ ಸಸ್ಯಗಳು ಹೆಚ್ಚಾದರೆ ಒಳ್ಳೆಯದಲ್ಲವೇ?

(ಲೇಖಕರು: ದಾವಣಗೆರೆ ವಿಶ್ವವಿದ್ಯಾಲಯದ ಸೂಕ್ಷ್ಮಜೀವಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರು)

Vishwavani Pg.Spl 04

ಆಹಾರವೇ ವೈದ್ಯ

ಸರ್ವ ರೋಗಕ್ಕೂ ರಾಮಬಾಣ ಸಿರಿಧಾನ್ಯ

• ಬಿಂ. ಮು. ಮಾರುತಿ

ಜನ ಜೀವನಶೈಲಿ ಬದಲಾಗುತ್ತಿದ್ದಂತೆ ಸಾಂಪ್ರದಾಯಿಕ ಹಾಗೂ ಆರೋಗ್ಯಕರ ಅಡುಗೆ ತಿನ್ನಿಸುಗಳು ಮರೆತೇ ಹೋಗಿವೆ. ಇನ್ನು ಸಿರಿಧಾನ್ಯಗಳ ಬಳಕೆಯಂತೂ ತೀರ ಕಡಿಮೆಯಾಗಿದೆ ಆದರೆ ಸಿರಿಧಾನ್ಯಗಳ ಪ್ರಯೋಜನ ಗೊತ್ತಾದರೆ ನೀವು ಪ್ರತಿನಿತ್ಯವು ಸಿರಿಧಾನ್ಯ ಬಳಸೋದನ್ನ ಮಿಸ್ ಮಾಡುವುದೇ ಇಲ್ಲ, ನಮ್ಮ ರಾಜ್ಯದಲ್ಲಿ ರಾಗಿ, ಸಜ್ಜೆ, ನವಣೆ, ಬರಗು ಸಾಮೆ, ಊದಲು, ಆರ್ಕ, ಕೊರಲೆ ಇತರ ಸಿರಿಧಾನ್ಯಗಳನ್ನ ಕಾಣಬಹುದು. ಆದರೆ ಇವುಗಳಲ್ಲಿ ನಾವು ಹೆಚ್ಚಾಗಿ ಬಳಸೋದು ರಾಗಿ ಮತ್ತು ಜೋಳ ಮಾತ್ರ ಇನ್ನುಳಿದ ಧಾನ್ಯಗಳನ್ನ ಉಪಯೋಗಿಸುವುದು ತೀರಾ ಕಡಿಮೆ ಎನ್ನಬಹುದು. ಹಿಂದಿನ ಕಾಲದಲ್ಲಿ ನಮ್ಮ ಹಿರೀಕರು ಹೆಚ್ಚಾಗಿ ತಿನ್ನುತ್ತಿದ್ದ ಊಟವೆಲ್ಲಾ ಸಿರಿಧಾನ್ಯಗಳಿಂದ ಕೂಡಿದ್ದವು ಆಗಾಗಿ ನಮ್ಮ ಹಿರಿಯರು ಯಾವುದೇ ಖಾಯಿಲೆಗಳಿಲ್ಲದೆ ದೀರ್ಘಾಯುಷಿಗಳಾಗಿದ್ದರು.

ಸಿರಿಧಾನ್ಯ ನಮ್ಮ ದೇಹಕ್ಕೆ ಅಗತ್ಯವಾಗಿ ಬೇಕಾಗಿರುವ ಪೌಷ್ಟಿಕ ಸತ್ವಗಳಾದ ತಾಮ್ರ, ಮೆಗ್ನೀಷಿಯಂ, ಪಾಸ್ಪರಸ್, ಮ್ಯಾಂಗನೀಸ್ ಮತ್ತು ಇತರ ಪೌಷ್ಟಿಕ ಸತ್ವಗಳು ಸಾಕಷ್ಟು ಲಭ್ಯವಿದೆ. ಅಸಮತೋಲನವಾದ ಆಹಾರದ ಪದ್ಧತಿಯಲ್ಲಿ ಸಿರಿಧಾನ್ಯಗಳು ನಿಮಗೆ ಆರೋಗ್ಯಕರವಾದ ಜೀವನವನ್ನು ಒದಗಿಸಲು ಸಹಾಯ ಮಾಡುತ್ತದೆ ಹಾಗು ಕ್ಯಾಲೋರಿಗಳ ಬಗ್ಗೆ ಹೆಚ್ಚು ಗಮನ ಹೊಂದಿರುವ ಜನರಿಗೆ ಹೇಳಿ ಮಾಡಿಸಿದ ಆಹಾರ ಎಂದರೆ ಅದು ಸಿರಿಧಾನ್ಯ ಎಂದು ಹೇಳಬಹುದು .

ಇತ್ತೀಚಿಗೆ ಬದಲಾದ ಜೀವನ ಶೈಲಿಯಿಂದ ಮನುಷ್ಯರಿಗೆ ಕಾಡುತ್ತಿರುವ ಹೃದಯದ ಸಮಸ್ಯೆಗಳು, ಪಾರ್ಶ್ವವಾಯು, ರಕ್ತದೊತ್ತಡ , ಮಧುಮೇಹ ಹೀಗೆ ದೀರ್ಘ ಕಾಲ ಕಾಡುವ ಕಾಯಿಲೆಗಳಿಂದ ಜನರು ನಿಶಕ್ತರಾಗಿದ್ದಾರೆ. ಹಾಗಾಗಿ ಈ ಸಂದರ್ಭದಲ್ಲಿ ಪೌಷ್ಟಿಕಾಂಶಗಳನ್ನು ಒಳಗೊಂಡಿರುವ ಸಿರಿಧಾನ್ಯದ ಅವಶ್ಯಕತೆ ಜನರಿಗಿದೆ. ಇದರಲ್ಲಿ ಕಡಿಮೆ ಕ್ಯಾಲೋರಿಗಳಿರುವುದರಿಂದ ಆರೋಗ್ಯಕ್ಕೆ ಯಾವುದೇ ಹಾನಿ ಉಂಟಾಗದೇ ದೇಹದ ತೂಕವನ್ನು ಕಡಿಮೆ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.



ದೇಹದಲ್ಲಿ ವಿಪರೀತ ಬೊಜ್ಜು ಮತ್ತು ಕೊಬ್ಬಿನ ಅಂಶ ಜೊತೆಗೆ ಕೊಲೆಸ್ಟಾಲ್ ಅಂಶ ತುಂಬಿಕೊಳ್ಳುವುದನ್ನು ತಪ್ಪಿಸುತ್ತದೆ.

ರಾಸಾಯನಿಕಯುಕ್ತ ಆಹಾರ ಮತ್ತು ಜಂಕ್‌ಫುಡ್ ಸೇವನೆಯಿಂದ ಮಧುಮೇಹ, ಕ್ಯಾನ್ಸರ್, ಸ್ಥೂಲಕಾಯ, ಹೃದಯಸಂಬಂಧಿ ಕಾಯಿಲೆಗಳು ಸೇರಿದಂತೆ ಹಲವಾರು ಸಮಸ್ಯೆಗಳು ವಯಸ್ಸಿನ ಬೇಧವಿಲ್ಲದೆ ಎಲ್ಲರನ್ನೂ ಕಾಡುತ್ತಿದೆ. ಇಂತಹ ಸಂದರ್ಭದಲ್ಲಿ ಆರೋಗ್ಯ ಸುಧಾರಣೆಯಾಗಬೇಕಾದರೆ ಸಿರಿಧಾನ್ಯ ಬಳಸಬೇಕು.

VijayaKarnataka Pg.02

ಖಾಲಿ ಜಾಗದ ಮೇಲೆ ಪಾರ್ಥೇನಿಯಂ ಕಣ್ಣೇಕೆ?

ರೈತಗಾಥೆ

ಡಾ. ವಿಜಯ್ ಅಂಗಡಿ



ಹಲವೆಡೆ ಹುಲುಸಾಗಿ ಬೆಳೆಯುವ ಪಾರ್ಥೇನಿಯಂ ಕಳೆ 1961ರಲ್ಲಿ ಕರ್ನಾಟಕದಲ್ಲಿ ಕಾಣಿಸಿಕೊಂಡಿತು. ಎಲ್ಲಾ ರೀತಿಯ ಜಮೀನುಗಳಲ್ಲಿ, ತೋಟಗಳಲ್ಲಿ ಹೇರಳವಾಗಿ ಬೆಳೆಯುವ ಈ ಕಳೆಯನ್ನು ಅಷ್ಟು ಸುಲಭವಾಗಿ ನಿರ್ಮೂಲನೆ ಮಾಡಲು ಸಾಧ್ಯವಿಲ್ಲ, ಆದರೆ ಇದನ್ನು ಆಗಾಗ್ಗೆ ಹತೋಟಿ ಮಾಡುತ್ತಾ ಹೋದರೆ ಅಷ್ಟೊಂದು ಸಮಸ್ಯೆ ಆಗುವುದಿಲ್ಲ, ಕಳಪೆ ಜಮೀನಿನಲ್ಲೂ, ಆರೋಗ್ಯಕರವಾಗಿ ಬೆಳೆಯುವ ಪಾರ್ಥೇನಿಯಂ ಕಳೆಯು ಫಲವತ್ತಾದ ಜಮೀನುಗಳಲ್ಲಿ ಹುಲುಸಾಗಿ ಅಭಿವೃದ್ಧಿಯಾಗುತ್ತದೆ. ಬಿಸಿಲು ಬೀಳುವ ಜಾಗಗಳಲ್ಲಂತೂ ಹೇರಳವಾಗಿ ಬೆಳೆಯುತ್ತಾ ಹೋಗುತ್ತದೆ.

ಪಾರ್ಥೇನಿಯಂ ಒಂದು ಅಲ್ಪಾವಧಿ ಸ್ವಭಾವದ ಕಳೆ. ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಈ ಕಳೆಯು ಬೆಳೆಯುತ್ತಿರುತ್ತದೆ. ತೋಟಗಳಲ್ಲಿ ಈ ಕಳೆಯ ಬೆಳವಣಿಗೆ ಅಷ್ಟೊಂದು ಹುಲುಸಾಗಿ ಇರುವುದಿಲ್ಲ, ಆದರೆ, ಎಲ್ಲಾ ಕಳೆಗಳಿಗಿಂತ ಬಹುಬೇಗ ಬೆಳೆಯುವ ಪಾರ್ಥೇನಿಯಂ ಒಂದು ರೀತಿಯಲ್ಲಿ ಸಾವಯವದ ಅಂಶವನ್ನು ಮಣ್ಣಿಗೆ ಪೂರೈಸುವಲ್ಲಿ ನೆರವಾಗುತ್ತದೆ ಎಂದೇ ಹೇಳಬಹುದು. ಜಾನುವಾರುಗಳು ಅಷ್ಟೊಂದು ಇಷ್ಟಪಟ್ಟು ಇದನ್ನು ಸೇವಿಸುವುದಿಲ್ಲ, ಕೆಲವೊಂದು ಕೀಟಗಳು ಅಲ್ಪಸ್ವಲ್ಪ ಪ್ರಮಾಣದಲ್ಲಿ ಇದರ ಎಲೆಗಳನ್ನು, ಹೂಗಳನ್ನು ತಿನ್ನುವುದುಂಟು. ಈ ಕಳೆಯಲ್ಲಿ 'ಪಾರ್ಥೇನಿನ್' ಎಂಬ ರಾಸಾಯನಿಕ ಇರುವುದರಿಂದ ದನಕರುಗಳಿಗೆ, ಪ್ರಾಣಿಪಕ್ಷಿಗಳಿಗೆ ಇದು ಇಷ್ಟವಾಗುವುದಿಲ್ಲ, ಇದರಂತೆ ಕೆಲವೊಬ್ಬರಿಗೆ ಅಲರ್ಜಿಯೂ ಆಗುವುದಿದೆ.

ಪಾರ್ಥೇನಿಯಂ ಕಳೆಯು ಮುಂಗಾರಿನ ಹಂಗಾಮಿನಲ್ಲಿ ಎಲ್ಲೆಡೆ ಕಾಣಿಸಿಗುವ ಕಳೆಯಾಗಿದೆ. ಹಳ್ಳಿ, ಪಟ್ಟಣ ನಗರಗಳಲ್ಲಿ ಕಳೆಯು ಈ ಸಂದರ್ಭದಲ್ಲಿ ಬೆಳೆದಿರುವುದನ್ನು ಕಾಣಬಹುದು. ಆದರಲ್ಲೂ ಅಲ್ಪಾವಧಿ ಬೆಳೆಗಳ ಜೊತೆಗೆ ಈ ಕಳೆ ಸೇರಿಕೊಂಡರಂತೂ ದೊಡ್ಡ ತಲೆನೋವು. ತೋಟಗಳಲ್ಲಿ ಬೆಳೆದಾಗ ಅದನ್ನು ಕತ್ತರಿಸಿ ಮಣ್ಣಿಗೆ ಸೇರಿಸುವುದು ಕಷ್ಟವಾಗಲಾರದು. ಆದರೆ, 3-4 ತಿಂಗಳ ಬೆಳೆಯೊಂದಿಗೆ ಸೇರಿಕೊಂಡಾಗ ಇದನ್ನು ಕಿತ್ತೆಸೆಯುವುದು ಕಷ್ಟವೇ. ಈ ಸಲುವಾಗಿ ಕಳೆ ಇನ್ನೂ ಚಿಕ್ಕದಿದ್ದಾಗ ಹತೋಟಿ ಮಾಡುವುದು ಬಹು ಸುಲಭ. ಬೆಳೆದಂತೆಲ್ಲ ಬೆಳೆದಂತೆಲ್ಲ ಆಳಕ್ಕೆ ಬೇರು ಬಿಡುವ, ಎತ್ತರಕ್ಕೆ ಬೆಳೆಯುವ ಈ ಕಳೆಯನ್ನು ಕೀಳಲು ಹೆಚ್ಚು ಸಮಯ ಬೇಕಾದೀತು. ಹಾಗೆಯೇ ಹೆಚ್ಚು ಕಾರ್ಮಿಕರ ಅಗತ್ಯತೆಯೂ ಇರುತ್ತದೆ. ಬದುಗಳಲ್ಲಿ, ಕಾಲುವೆಗಳ ಬದಿ, ಖಾಲಿ ಜಾಗಗಳಲ್ಲಿ ಪಾರ್ಥೇನಿಯಂ ಹೇರಳವಾಗಿ ಬೆಳೆಯುವುದರಿಂದ ಅದನ್ನು ಸದುಪಯೋಗ ಮಾಡಿಕೊಳ್ಳುವ ನಿಟ್ಟಿನಲ್ಲಿ ನಾವೆಲ್ಲ ಗಮನಹರಿಸಬಹುದು. ಉತ್ತಮ ಪ್ರಮಾಣದ ಸಾವಯವದ ಅಂಶವನ್ನು ಹೊಂದಿರುವ ಈ ಕಳೆಯು ಬಹುಬೇಗ ಕರಗುತ್ತದೆ. ಕತ್ತರಿಸಿ ಗಿಡಗಳ ಬುಡಕ್ಕೆ ಹಾಕುವುದು, ಇತರೆ ಪದಾರ್ಥಗಳೊಂದಿಗೆ ಸೇರಿಸಿ ಗೊಬ್ಬರ ಮಾಡಿಕೊಳ್ಳುವುದು, ಹತ್ತಾರು ಗಿಡಗಳೊಂದಿಗೆ ದ್ರವರೂಪದ ಗೊಬ್ಬರ ಮಾಡಿಕೊಳ್ಳುವ ನಿಟ್ಟಿನಲ್ಲೂ ಗಮನಹರಿಸುವುದೂ ಉಪಯುಕ್ತ. ಕೆಲವೊಬ್ಬ ರೈತರು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ ಯಶಸ್ಸನ್ನು ಕಂಡಿದ್ದಾರೆ.



ಬೇಗ ಬೆಳೆಯುವ, ಉತ್ತಮ ಸಾವಯವ ಅಂಶವನ್ನು ಒದಗಿಸುವ ಪಾರ್ಥೇನಿಯಂ ಅನ್ನು ಮಣ್ಣಿನ ಫಲವತ್ತತೆಯ ಸುಧಾರಣೆ ಮಾಡಿಕೊಳ್ಳಲು ಉಪಯೋಗಿಸಿಕೊಳ್ಳುವುದು ಒಂದು ರೀತಿಯಲ್ಲಿ ಜಾಣತನ. ಕೇವಲ ನಾಲ್ಕಾರು ತಿಂಗಳುಗಳಲ್ಲಿ ಒಂದೊಂದು ಗಿಡವು 700ರಿಂದ 4000 ಬೀಜಗಳನ್ನು ಉತ್ಪಾದಿಸಬಲ್ಲದು. ಇಂಥ ಸಾಮರ್ಥ್ಯ ಇರುವುದರಿಂದಲೇ ಇಷ್ಟೊಂದು ಪ್ರಮಾಣದಲ್ಲಿ ಇಂದು ಈ ಕಳೆಯು ಎಲ್ಲೆಡೆ ಕಾಣುತ್ತಿದೆ. ಹೊದಿಕೆ ಬೆಳೆಗಳಾದ ಅಲಸಂದೆ, ಗೆಣಸು, ಹುರಳಿ, ಸೆಣಬು, ಇತ್ಯಾದಿಗಳನ್ನು ಬೆಳೆಸಿಕೊಂಡಾಗ ಈ ಕಳೆಯು ಅಷ್ಟೊಂದು ಕಾಣಲಾರದು.

(ಕೃಷಿ ತಜ್ಞರು ಮತ್ತು ಕಾರ್ಯಕ್ರಮ ನಿರ್ವಾಹಕರು, ಆಕಾಶವಾಣಿ, ಹಾಸನ)

Times of India Pg.01

Tomato ₹11.6 a piece, box costs ₹1,600 at APMC

The price of tomatoes continued to rise with the Kolar AMPC reporting sales of a box at Rs 1,600. According to the APMC, a box contains around 138-140 tomatoes weighing a total of 14kg. This puts the cost of each tomato at Rs 11.6. This has been the price for the last three days. Delayed monsoon has seen the prices of vegetables soar across the country. TNN

THE HINDU
Sunday, July 9, 2023

Vanamahotsava celebrated

The Hindu Bureau
BENGALURU

University of Agricultural Sciences-Bengaluru (UAS-B) jointly with the Department of Forests, Government of Karnataka, on Saturday celebrated "Vanamahotsava" by planting tree saplings.

Dr. S.V. Suresh, Vice Chancellor of UAS-B, said by this month end, we have plans to plant 2,000 saplings on the premises of GKVK, the release added.

WOE OVER TOMATO, CHILLI HITTING TONS

Household budgets, biz in distress as prices soar; deficit rain, low produce key factors

BIG PICTURE

PURAN CHOUDHARY @Bengaluru

IN some kitchens in homes and restaurants, tomatoes are no longer found in salads. The juicy, red vegetable is being replaced by tamarind or tomato puree. It has fallen off the McDonald menu, and tomato chaat has disappeared from streetside stalls. At Rs 120 per kg (as of July 9), this staple ingredient is sparingly found in Indian curries. Since June, the prices of tomatoes, chillies, carrots, beans, garlic and ginger have been on the rise, but the real impact can be felt now. All vegetables have undergone cost inflation of 40-60 per cent in July, and consumers said their kitchen budgets have shot up from around Rs 1,500 in June to Rs 2,000 in July. With the price of essential ingredients skyrocketing, many households are now forced to shell out more to buy basic vegetables, and also look for alternatives.

Essentials, expensive affair

Horticultural Producers' Cooperative Marketing and Processing Society (Hopcoms) in Bengaluru on Friday reported that the price of tomatoes was fixed at Rs 120 per kg, and cherry tomatoes at Rs 160 per kg. In retail markets, varieties such as nati tomato (Rs 130 per kg), hybrid tomato (Rs 134 per kg) and organically grown tomato (Rs 212 per kg) are making consumers wary of the vegetable.

In Hassan, tomatoes are sold in the retail market at Rs 160 per kg, which were priced at Rs 50 per kg at this time in 2022; a huge jump of 220 per cent. In Dharwad, tomatoes are retailing at Rs 120 to Rs 140 per kg, depending on the different varieties, like hybrid and organic. In Mysuru, wholesale rate of tomatoes is Rs 80 per kg and retail price has crossed Rs 100. In Shivamogga, the retail price is Rs 100-120 per kg.

Hopcoms MD Mirji Umesh Shankar told TNIE, "Prices are high all over Karnataka. We have stopped receiving tomato produce from Nashik in Maharashtra, which has further hiked prices, and the rain deficit in Karnataka and all over the country is impacting prices." Prices may not come down for a couple of weeks, and will burden consumers, he added.

Kolar, Asia's second-largest tomato market that supplies to the entire country, does not paint a good picture of the current situation. Farmers and traders say that prices will go through the roof in the coming weeks.

According to Agricultural Produce Market Committee (APMC) Secretary Vijayalakshmi, the reason behind the price rise is low produce. "Earlier, 4-5 lakh crates weighing 15kg each arrived in the market daily. However, currently, only 70,000 to 80,000 boxes of tomatoes are arriving at the market in Kolar. This has caused a spike in price. Initially, each crate was selling at Rs 650 but as of Sunday, a few boxes of good quality products were sold at Rs 1,800 for 15kg," she said.

It was a similar situation in Mysuru, another big producer of tomatoes. Horticulture Deputy Director K Rudresh, Mysuru, said there has been no big fluctuation in prices of chilli, ginger and onion, but tomato prices have increased due to a shortfall in cultivation. "Tomatoes were planted in March, but as temperatures increased, only 60 per cent of the crop survived." He explained that a delay in the arrival of the monsoon led to 40 per cent lower harvest this season.

"The APMC yard, which used to get 15,000 crates of tomatoes per day, is getting only 5,000 crates, while consumption remains the same," Rudresh said, adding that sowing was completed after the onset of the monsoon, and "the situation should normalise in 15 days, post-harvest".

Negative factors

Farmers from Kolar complained that for them, the price hike is a "no loss, no gain" affair. The yield is affected because of the whitefly virus, which is an ongoing problem in many parts of the country. According to Sudarshan, a farmer in Srinivasapura, Kolar, tomato growers are unable to find a solution for the virus, which is destroying crops, and the yield has fallen to 10 to 15% of good crop, while the rest is damaged. Despite soaring prices, farmers are not earning profits as they are only able to transport a fraction of the crop, at the usual cost. Also, drought in some regions and heavy rainfall in others is destroying the quality of vegetables.

Kalaburagi-based merchant Usmansab said, "Deficit rainfall in Kalaburagi district and heavy rain in Maharashtra, from where tomatoes arrive, are the major reasons for a hike in the price of tomatoes and green chilli." Many customers have stopped buying these vegetables, he said.

Satish Patil, wholesaler, APMC, Belagavi, said cyclones in North India led to fluctuating rates. He recalled that two months ago, tomatoes had fallen to Rs 2 per kg which had discouraged local farmers from cultivating the crop, leading to a dearth in quantity.

In Hassan, wholesalers hiking prices without any profits reaching the farmers, also came to light. In Shivamogga, most vegetables are purchased from other states and sold in local markets. Vegetable merchants said low rainfall has pushed up prices. During this period, onions and potatoes came from Pune and Satara in Maharashtra, and Indore in Madhya Pradesh.

The rainfall deficit has also reduced the quality of potatoes and onions. "The delay in rain has pushed the arrival of onions to November. The quantity of onions and potatoes coming to the Shivamogga market from other states has come down significantly," said Ramu, a wholesale distributor in Shivamogga APMC. Vendors and the public are in a state of worry, as ginger prices are sizzling across the country. In Karnataka, the ingredient is being purchased at Rs 400 per kg, affecting not just households but burning a hole in small eatery owners' pockets as well. In Bengaluru, ginger is marketed at Rs 358 per kg in Hopcoms, with a slight fluctuation in retail markets. The root vegetable has been selling at Rs 280 per kg in some districts. Garlic is witnessing a steep price rise. Hopcoms listed the price at Rs 192 per kg and cleaned garlic at 208 per kg.

In Hassan, chillies are selling at Rs 130 per kg, whereas during the same period last year, they were sold at a retail price of Rs 30 per kg. In Bengaluru, green chillies are priced at Rs 132 per kg and retail prices vary between Rs150 and Rs 200 per kg. Many online grocery portals have starting putting up 'no stock' sign.

In Dharwad, prices are comparatively low -- chillies are priced at Rs 40 to 60 per kg in retail, and Rs 30 to 45 per kg. For Mysuru, chillies cost Rs 80 per kg in wholesale and Rs 100 in retail.

Paramesh, a wholesaler in Hassan said that the quality of vegetables has also been dwindling due to dry spells and the increased impact of climate change on green vegetables.

"The price of basic vegetables such as brinjal, cabbage, carrot, radish and drumstick remained the same in wholesale and retail markets. However, prices may increase in the coming days as sowing area has decreased in the district," he added.

In Dharwad, the state of onions is also worrisome. They are being purchased from neighbouring districts and even Maharashtra at almost a 40 per cent higher rate, while onions grown here are being sent to other states. Very soon, this staple vegetable will become an expensive affair.

Jeevan Kulal, proprietor of JJ Vegetables and Fruits, Manipal, said there are no local vegetable varieties these days, so people depend on vegetables brought from Chikkamagaluru, Hassan, Bengaluru and Belagavi. Some quantity of the local GI-tagged Mattu Gulla is available, and priced at Rs 180 per kg. He added that vegetable prices may come down after two months, when the rain recedes.

Usually, in the last week of September and early October, locally grown onions from Hosadurga, Hiriyur and other places in Chitradurga and Gadag districts start arriving, however, delayed rainfall might further push it by a month.

However, the situation in Kalaburagi seems different. Veerabhadrappa, a vegetable vendor, said, "Onions have become cheaper and are being sold at Rs 100 for 5kgs." Sources in Hassan alleged that there are no fresh vegetables available at Hopcoms, and in Dharwad, the quality of green leafy vegetables is affected as retail prices double. A resident of Banashankari in Bengaluru, Roopa Dhruvaraj shared the difference in her ration and grocery bills – Rs 4,496 in June, and Rs 6,022 for the same items in July.

Dhurvaraj said that despite the hike in almost all essentials, she cannot avoid the expenses. "Tomatoes are selling at Rs 150 per kg, which was earlier Rs 40, dosa rice costs Rs 42 per kg. How are we meant to manage the household?" she said, and added that since these are essentials, no alternatives can be used. Vinuta, a homemaker in Kalaburagi, has stopped buying tomatoes and chillies which are selling at Rs 100 per kg. Another citizen in Bengaluru said she has to calculate the expense before making certain delicacies. "Homemakers set aside a specific budget for monthly groceries, and it is hard for them to manage at such exorbitant prices. Health takes a backseat as nutritional value decreases," said Mahalakshmi B.

Impact on restaurants

While price fluctuations are making new records every day, small eateries, tiffin service centres and restaurants are bearing the brunt. As their menus are set and prices cannot be changed weekly, profits have reduced considerably.

Gurdeep Singh, who runs a tiffin service called Peppy Punjabi, which caters to around 400 people in east Bengaluru, said business has been hit hard. "We cannot compromise on the quality of food, so we are purchasing only hybrid tomatoes. We are taking a cut on what we earn and almost serving food for free, because not just vegetables, pulses, spices and flour are also costlier." Currently, budgets have increased by 35 per cent, leaving very little margin.

Bruhat Bangalore Hotels Association (BBHA), which has 24,500 hotels under its umbrella, said retail and bulk rates are nearly the same now. In fact, good quality tomatoes cost more in wholesale markets. PC Rao, president of BBHA said, "Restaurants have no option but to start using alternatives such as tomato puree. Currently, they are relying on 75 per cent puree and 25 per cent fresh tomatoes."

(Inputs by Ramkrishna Badeshi, Udaya Kumar, BK Lakshmikanta, Ramachandra Gunari, Prakash Samaga, Mallikarjun Hiremth, Tushar Majukar and V Velayudham)

Rate Card in Karnataka

TOMATOES
- **Bengaluru** ₹120/kg
- **Hassan** ₹160 /kg
- **Dharwad** ₹120-140 /kg
- **Mysuru** ₹100 /kg
- **Shivamogga** ₹100-120/kg

CHILLIES
- **Bengaluru** ₹132/kg
- **Hopcoms** ₹210/kg
- **Hassan** ₹130/kg
- **Dharwad** ₹40 to 60/kg
- **Mysuru** ₹100/kg

GINGER
- **Bengaluru** ₹358/kg
- **Other dists:** ₹280 - 310 /kg

GARLIC
Hopcoms, Bengaluru
- **Normal garlic:** ₹192/kg
- **Cleaned garlic:** ₹208/kg



PIC: SHASHIDHARA N M

At 160/kg, Tomatoes Likely to Squeeze Kitchen Budgets More

Prices could rise more as rains in north India are preventing harvests

Jayashree.Bhosale
@timesgroup.com

Pune: Tomato prices aren't likely to ease up any time soon. In fact, the current ₹150 a kg rate may seem like a bargain in some days, experts said. Prices could rise further this month as heavy rain continues to lash Himachal Pradesh, preventing harvests and disrupting logistics.

The Himachal crop was supporting supplies from Bengaluru, currently the main source of tomatoes for most parts of the country.

Vegetables such as cabbage, cauliflower cucumber, leafy greens etc. may also become expensive because of the disruption caused by record rain in the north Indian hills.

"The heavy rainfall in north India, especially in Himachal Pradesh, will damage most of the standing crop of tomatoes, cabbage, cauliflower, capsicum etc.," said SK Singh, director of the Indian Institute of Horticulture Research, Bengaluru.

Change in Tomato Prices

Place	Retail price on Jun 1 (₹)	Retail price on Jul 9 (₹)	% variation in price
Delhi	21/kg	127/kg	504
Mumbai	22/kg	130/kg	490
Bengaluru	13/kg	90/kg	592
Chennai	29/kg	105/kg	262
All-India*	25.44/kg	99.8/kg	292

*average

Source: Ministry of consumer affairs

REASONS FOR SHORTAGE

Farmers reduced planting after losses incurred last year

Incidence of viral diseases

Weather shocks



COSTLY TREND

Vegetables such as cabbage, cauliflower cucumber, leafy greens etc may also become expensive

"Viruses and wilt will rot the crop due to waterlogging, which will result in prices moving substantially upwards," he said.

Himachal is a major supplier of cabbage, cauliflower and capsicum not just to Delhi but many states of the country during this season.

"Higher prices of vegetables leads to consumers shifting to pulses," which could further lift their already high prices, said Singh.

TRANSPORT HURDLE

The closure of several key roads due to landslides will halt the transport of fruits and vegetables

Himachal Pradesh, Rajasthan, Uttarakhand, Rajasthan, Haryana and Jammu and Kashmir saw heavy rainfall last week. Delhi recorded the highest single-day rainfall in July in 40 years on July 8.

The closure of several key roads due to landslides will halt the transport of fruits and vegetables from the hills to the plains.

"We are afraid that the wholesale tomato prices may increase up to ₹140-150 per kg in a week as the local supplies from states in north India will dwindle due to heavy rainfall," said Amit Malik, a tomato trader at Delhi's Azadpur wholesale market.

Tomato prices are currently ruling at ₹40-110 per kg in the wholesale markets and ₹100-160 per kg in retail in different parts of the country after growers reduced planting due to losses incurred last year.

The Bengaluru crop has also fallen short this year.

"There is a fall in tomato production in Bengaluru as the crop succumbed to the incidence of viral diseases that spread due to earlier unseasonal rainfall," said Singh.

Consumers can expect prices to soften only after August when tomatoes from other pockets such as Solapur, Pune, Nashik, and Solan start to arrive.